ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 32 ಆಗಸ್ಟ 9, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಅಖಿಲ ಭಾರತ ಕಾರ್ಮಿಕರ ಪ್ರತಿಭಟನೆ

ಆಗಸ್ಟ್ 3, ಕರ್ನಾಟಕದ ಎಲ್ಲೆಡೆ ಮೊಳಗಿದ ಕರೆ

– ಎಸ್. ಸೂರ್ಯನಾರಾಯಣರಾವ್

ಕಾರ್ಮಿಕಸಂಘಟನೆಗಳ ರಾಷ್ಟ್ರೀಯ ಆಂದೋಳನಾ ಸಮಿತಿಯ ಕರೆಯ ಮೇರೆಗೆ ಕರ್ನಾಟಕದಲ್ಲಿಯೂ ವ್ಯಾಪಕವಾಗಿ ಪ್ರತಿಭಟನೆ, ಬಂಧನ, ಪ್ರದರ್ಶನಗಳು ನಡೆದಿವೆ. ಸಿ.ಐ.ಟಿ.ಯು. ರಾಜ್ಯ ಮಂಡಳಿ ಸಭೆ ಜುಲೈ 28ರಿಂದ 30 ರವರೆಗೆ ಮೈಸೂರಿನಲ್ಲಿ ನಡೆದು ಈ ಕರೆಯನ್ನು ಸಾಧ್ಯವಾದ ಕಡೆಗಳಲ್ಲೆಲ್ಲಾ ಮುಷ್ಕರ, ಸತ್ಯಾಗ್ರಹ, ಬಂಧನ ಕಾರ್ಯಕ್ರಮ ನಡೆಸಿ ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ತಿದ್ದುಪಡಿಗಳು ರದ್ದಾಗಲು, ತುಟ್ಟಿ ಭತ್ಯೆ ಕಡಿತ ಮಾಡುವ ಉದ್ದೇಶ ಹೊಂದಿರುವ 1960ರ ಬೆಲೆಸೂಚ್ಯಾಂಗಕ್ಕೆ ಬದಲಾಗಿ 1982 ರ ಸೂಚ್ಯಾಂಕ ತರುವ ಪ್ರಯತ್ನ ತಡೆಗಟ್ಟಲು ಮಿಲಿಯಾಂತರ ದುಡಿಯುವ ಜನತೆಗೆ ಬಡತನದ ರೇಖೆಗಿಂತ ಕಡಿಮೆಯಾಗದಂತೆ ಯೋಜನಾ ಆಯೋಗವೇ ಒಪ್ಪಿಕೊಂಡ ಆಧಾರದಲ್ಲಿ 700ರೂ ವೇತನಕ್ಕಾಗಿ ಒತ್ತಾಯಿಸಲು ತೀರ್ಮಾನಿಸಿತ್ತು. ಕನಿಷ್ಠ ವೇತನ ಕಾನೂನಿಗೆ ಒಳಪಟ್ಟಿರುವ ಜನ ನಮ್ಮ ರಾಜ್ಯದಲ್ಲಿ 60ಲಕ್ಷಕ್ಕೂ ಮಿಗಿಲಾಗಿದೆ. ಇದರಲ್ಲಿ ಮುಖ್ಯವಾಗಿ ಬರುವವರು ಬೀಡಿ ಕಾರ್ಮಿಕರು, ಹಂಚು, ತೋಟ ಕಾರ್ಮಿಕರು ಇತ್ಯಾದಿಗಳು. ಆದ್ದರಿಂದಲೇ ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್, ತೋಟ ಕಾರ್ಮಿಕರ ಸಂಘಗಳು. ದ.ಕ. ಹಂಚಿನ ಕೆಲಸಗಾರರ ಸಂಘಗಳು ಮುಷ್ಕರದ ಕರೆ ನೀಡಿದ್ದವು.

ಕೇಂದ್ರ ಸರ್ಕಾರದ ಹಾಗೂ ನಮ್ಮ ರಾಜ್ಯಸರ್ಕಾರದ ಮಂತ್ರಿಗಳು ಅಸಂಘಟಿತರನ್ನು ಸಂಘಟಿತ ಕಾರ್ಮಿಕರಮೇಲೆ ಎತ್ತಿ ಕಟ್ಟುವ ಪ್ರಯತ್ನ ನಡೆಸುತ್ತಲೇ ಇದ್ದಾರೆ. ಈ ಪ್ರಯತ್ನ ದುಡಿಯುವ ವರ್ಗದ ಐಕ್ಯತೆ ಮುರಿಯಲು ಮಾಡುವ ಪ್ರಯತ್ನ. ಸಂಘಟಿತ ಕಾರ್ಮಿಕರು ಅಸಂಘಟಿತ ವಿರೋಧಿಯಲ್ಲ, ಆದಕ್ಕೆ ಬದಲಾಗಿ ಅವರ ಪರವಾಗಿ ಹೋರಾಡುವ ಸಂಘಟನೆ ಎಂಬುದನ್ನು ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಳನ ಸಮಿತಿ ಸಾರಿ ಹೇಳಲು ಕನಿಷ್ಠ ಕೂಲಿ ನಿಯಮಗಳ ವ್ಯಾಪ್ತಿಗೆ ಬರುವ ಎಲ್ಲಾ ಕಾರ್ಮಿಕರಿಗೆ 700ರೂ ವೇತನದ ಬೇಡಿಕೆ ಇಟ್ಟು ಪ್ರಚಾರ, ಪ್ರಕ್ಷೋಭೆ ನಡೆಸಿದೆ.

ಕರ್ನಾಟಕದಲ್ಲಿ ರಾಷ್ಟ್ರೀಯ ಆಂದೋಳನ ಸಮಿತಿ ಸಂಚಾಲಕರಾಗಿದ್ದ ಎ.ಐ.ಟಿ.ಯು.ಸಿ. ಮುಖಂಡರು ಮುತುವರ್ಜಿ ವಹಿಸಿದ್ದರೆ, ಅದೇ ರೀತಿ ಬಿ.ಎಂ.ಎಸ್. ಹಾಗೂ ಎಚ್.ಎಂ.ಎಸ್. ಸಂಘಟನೆಗಳು ಮುತುವರ್ಜಿ ವಹಿಸಿದ್ದರೆ ಈ ಕಾರ್ಯಕ್ರಮ ಇನ್ನೂ ದೊಡ್ಡ ಪ್ರಮಾಣದಲ್ಲಿ ನಡೆಯುವ ಸಾಧ್ಯತೆ ಇತ್ತು. ಸಿ.ಐ.ಟಿ.ಯು. ವಿನ ಪ್ರಯತ್ನದಿಂದ ಕರ್ನಾಟಕ ರಾಜ್ಯದ ರಾಷ್ಟ್ರೀಯ ಆಂದೋಳನ ಸಮಿತಿ ಚಲಿಸುವ ಹಾಗೆ ಮಾಡಲು ಸಾಧ್ಯವಾಯಿತು.

ಈಗ ಆರಂಭವಾಗಿರುವ ಈ ಹೋರಾಟ ಮುಂದುವರಿಯ ಬೇಕಾಗಿದೆ. ಅಸಂಘಟಿತ ಕಾರ್ಮಿಕರ ಬಗ್ಗೆ, ಹಾಗೂ ನಿರುದ್ಯೋಗಿಗಳ ಬಗ್ಗೆ ಸಂಘಟಿತ ಕಾರ್ಮಿಕರು ಅವರ ಹಿತ ದೃಷ್ಟಿಯಿಂದಲೇ ಆಸಕ್ತಿ ವಹಿಸಬೇಕಾಗಿದೆ.

ಕರ್ನಾಟಕ ರಾಜ್ಯ ಸರ್ಕಾರ ಈಗ ನಿಗದಿ ಮಾಡಿರುವ ಕನಿಷ್ಠ ಕೂಲಿಯನ್ನು ಪುನರ್ವಿಮರ್ಶಿಸಿ ರಾಷ್ಟ್ರೀಯ ಆಂದೋಳನಾ ಸಮಿತಿಯ ಒತ್ತಾಯಕ್ಕನುಗುಣವಾಗಿ ಹೆಚ್ಚಿಸಬೇಕಾಗಿದೆ. ಅದಕ್ಕನುಗುಣವಾಗಿ ತುಟ್ಟಿ ಭತ್ಯೆ ಹೆಚ್ಚಿಸಬೇಕಾಗಿದೆ.

[8ನೇ ಪುಟ ನೋಡಿ]

ಬೊಫೋರ್ಸ್ ಹಗರಣದ ಬಗ್ಗೆ ಸಂಸದೀಯ ತನಿಖೆ

ವಂಚನೆಯಲ್ಲಿ ಭಾಗಿಯಾಗಲು ವಿರೋಧ ಪಕ್ಷಗಳ ನಿರಾಕರಣೆ

ಸ್ವೀಡನ್ನಿನ ಬೊಫೋರ್ಸ್ ಕಂಪೆನಿಯಿಂದ ಹೊವಿಜ್ಜರ್ ಬಂದೂಕಗಳನ್ನು ಖರೀದಿಸುವಾಗಿ ಯಾವ ದಳ್ಳಾಳಿಯೂ ಇರಲಿಲ್ಲ ಎಂದು ಸಂಸತ್ತಿಗೆ ಸುಳ್ಳು ಹೇಳುತ್ತಾ ಬಂದ ಕಾಂಗ್ರೆಸ್(ಐ) ಸರ್ಕಾರ ಸ್ವೀಡನ್ನಿನ ಆಡಿಟ್‌ಬ್ಯೂರೋದ ವರದಿ ಪ್ರಕಟವಾದ ನಂತರ ಜಂಟೀ ಸಂಸದೀಯ ವಿಚಾರಣಾ ಸಮಿತಿ ನೇಮಿಸಲು ಒಪ್ಪಲೇ ಬೇಕಾಯಿತು. ಆದರೆ ಈ ಸಮಿತಿಯ ವ್ಯಾಪ್ತಿ ಹಾಗೂ ಅಧಿಕಾರಗಳನ್ನು ಸಾಧ್ಯವಾದಷ್ಟು ಮೊಟಕುಗೊಳಿಸಲು ಸರ್ಕಾರ ಸರ್ವ ಪ್ರಯತ್ನ ನಡೆಸಿತು. ಸತ್ಯವನ್ನು ಹೊರಗೆಳೆಯುವಲ್ಲಿ ಕಾಂಗೆಸ್(ಐ) ಕೂಡಾ ಇತರರಷ್ಟೇ ಕಾತುರವಾಗಿದೆ ಎಂದು ಬಾಯಲ್ಲಿ ಪದೇ ಪದೇ ಹೇಳುತ್ತಿದ್ದರೂ ಸತ್ಯವನ್ನು ಮರೆಮಾಚುವುದೇ ತಮ್ಮ ಮುಖ್ಯ ಉದ್ದೇಶವೆಂಬುದನ್ನು ಕಳೆದ ಎರಡು ವಾರಗಳಲ್ಲಿ ಸಂಸತ್ತಿನಲ್ಲಿ ಹಾಗೂ ಹೊರಗೆ ಪ್ರಧಾನಮಂತ್ರಿಯು ಸೇರಿದಂತೆ ಕಾಂಗ್ರೆಸ್(ಐ)ನವರ ನಡವಳಿಕೆ ಸ್ಪಷ್ಟವಾಗಿ ತೋರಿಸಿಕೊಟ್ಟಿದೆ. ಇದರಿಂದಾಗಿ ನಿರ್ವಾಹವಿಲ್ಲದೆ ಲೋಕಸಭೆಯಲ್ಲಿನ ವಿರೋಧ ಪಕ್ಷಗಳೆಲ್ಲಾ (ಯಥಾ ಪ್ರಕಾರ ಎ.ಐ.ಡಿ.ಎಂ.ಕೆ ಹೊರತು ಪಡಿಸಿ) ಆಗಸ್ಟ 6 ರಂದು ಜಂಟೀ ಸಂಸದೀಯ ಸಮಿತಿಯನ್ನು ಬಹಿಷ್ಕರಿಸಲು ನಿರ್ಧರಿಸಿವೆ. ಇದಕ್ಕೆ ಮೊದಲು ವಿರೋಧ ಪಕ್ಷಗಳ ತಿದ್ದುಪಡಿಗಳನ್ನು ಚರ್ಚೆಗೆ ತೆಗೆದುಕೊಳ್ಳಲು ಲೋಕಸಭಾಧ್ಯಕ್ಷರು ನಿರಾಕರಿಸಿದಾಗ ವಿರೋಧ ಪಕ್ಷಗಳು ಪ್ರತಿಭಟಿಸಿ ಸಭಾತ್ಯಾಗ ಮಾಡಿದವು. ಈಸಂದರ್ಭದಲ್ಲೇ ಜಂಟೀ ಸಮಿತಿಯನ್ನು ರಚಿಸುವ ಸರ್ಕಾರಿ ಸೂಚನೆಯನ್ನು ಅಂಗೀಕರಿಸಲಾಗಿಯೆಂದು ಲೋಕಸಭಾಧ್ಯಕ್ಷರು ಘೋಷಿಸಿದರು.

ರಕ್ಷಣಾ ಸಾಮುಗ್ರಿಗಳ ಖರೀದಿಯಲ್ಲಿ ಜನವರಿ 1980 ರಿಂದೀಚೆಗೆ ಸರ್ಕಾರ ಅನುಸರಿಸುತ್ತಿರುವ ವಿಧಾನ ಹಾಗೂ ಧೋರಣೆಗಳನ್ನು ಪರಿಶೀಲಿಸಲು ಜರ್ಮನ್ ಸಬ್‌ಮೆರೀನ್ ಹಗರಣವನ್ನೂ ಪರಿಶೀಲಿಸಲು, ಮಂತ್ರಿಗಳನ್ನು ಸಾಕ್ಷಿಗಾಗಿ ಕರೆಯಲು ಹಾಗೂ ವಿದೇಶಿ ನಾಗರಿಕರ ಸಾಕ್ಷಿ ಕೇಳಲು ಸಮಿತಿಗೆ ಅಧಿಕಾರಗಳು ಬೇಕೆಂದು ವಿರೋಧಪಕ್ಷಗಳು ಒತ್ತಾಯಿಸುತ್ತಿದ್ದವು. ಆದರೆ ಇವು ಯಾವುದನ್ನೂ ಗಣನೆಗೆ ತಗೊಳ್ಳದೆ ಕೇವಲ ಕೆಲವು ಕಣ್ಣೊರೆಸುವ ತಿದ್ದುಪಡಿಗಳನ್ನು ಸೇರಿಸಿ ಸರ್ಕಾರ ತನ್ನ ಸೂಚನೆಯನ್ನು ಲೋಕಸಭೆ ಅಂಗೀಕರಿಸಬೇಕೆಂದು ಬಯಸಿತು.

(…ನೇ ಪುಟ ನೋಡಿ)

ರಾಷ್ಟ್ರದ ಆರ್ಥಿಕ ಶಿಥಿಲವಾಗುತ್ತಿದೆ.

— ಪಿ. ರಾಮಚಂದ್ರರಾವ್

ಶ್ರೀಮಾನ್‌ರಾಜೀವ್‌ಗಾಂಧಿ ಮತ್ತವರ ಹಿಂಬಾಲಕರು "ಭಾರತ ದೇಶದ ಆರ್ಥಿಕ ಸುದೃಢವಾಗಿದೆ" ಎಂದು ಸಾರಿ ಬೊಬ್ಬೆ ಹೊಡೆದರೂ ಸೂಕ್ಷ್ಮವಾಗಿ ಆರ್ಥಿಕದ ವಿವಿಧ ಭಾಗಗಳನ್ನು ವೀಕ್ಷಿಸಿ, ವಿಶ್ಲೇಷಣೆ ನಡೆಸಿದರೆ "ದೇಶದ ಆರ್ಥಿಕವು ದಿನೇ ದಿನೇ ಹದಗೆಡುತ್ತಾಹೋಗುತ್ತಿದೆ" ಎಂಬ ಅನುಮಾನಕ್ಕೆ ಬರುವುದಕ್ಕೆ ಸಾಕಷ್ಟು ಸಂಗತಿಗಳು ಸಿಗುತ್ತವೆ.

ಮುಂಗಾರು ಮಳೆ ಈ ವರ್ಷ ತೀರಾ ಕೈಕೊಟ್ಟಿದೆ. ದೇಶದ ಅರ್ಧಕ್ಕಿಂತಲೂ ಅಧಿಕ ರಾಜ್ಯಗಳಲ್ಲಿ ಬರಗಾಲ ತೀವ್ರವಾಗಿ ಹಬ್ಬುತ್ತಿದೆ. ಕೆಲವು ರಾಜ್ಯಗಳಲ್ಲಂತೂ ಇದು ನಾಲ್ಕನೇ ಬರಗಾಲದ ವರ್ಷ. ಪರಿಣಾಮವಾಗಿ ಆಹಾರ ಧಾನ್ಯಗಳ ಉತ್ಪನ್ನ 150ಮಿಲಿಯಟನ್ ಸುತ್ತಲೂ ಸುಳಿದಾಡುತ್ತಿದೆ. ಅದರಲ್ಲೂ ಸಾಮಾನ್ಯ ಬಡ ಜನತೆ ಉಪಯೋಗಿಸುವ ದೊರಗು ಧಾನ್ಯ (ಒರಟು) ಗಳ ಉತ್ಪನ್ನವು ಇನ್ನಷ್ಟು ಕಡಿಮೆಯಾಗುತ್ತಾ ಹೋಗುತ್ತಿದೆ. ಅಂದರೆ ಬಡತನದ ರೇಖೆಗಿಂತಲೂ ಕೆಳಗಿರುವ ಕೃಷಿ ಕೂಲಿಗಾರರ ಮತ್ತು ಬಡ ರೈತರ ಮತ್ತು ಪೇಟೆ ಪಟ್ಟಣಗಳಲ್ಲಿರುವ ತೀರಾ ಬಡವರ 'ಜೀವನ' ಇನ್ನಷ್ಟು ಉಪವಾಸದ ಜೀವನವಾಗಿ ಪರಿಣಮಿಸುತ್ತಿದೆ. ರಾಸಾಯನಿಕ ಗೊಬ್ಬರ ಕಾರ್ಖಾನೆಗಳಿಗೆ ಕೊಟ್ಟ ಲೈಸೆನ್ಸ್ ಹಾಗೇ ಕೊಳೆತು ಬಿದ್ದಿದೆ. ಉತ್ಪತ್ತಿಯಾದ ರಾಸಾಯನಿಕ ಗೊಬ್ಬರಕ್ಕೇನೆ ಸಾಕಷ್ಟು ಗಿರಾಕಿಗಳಿಲ್ಲ !

ಇನ್ನು ಕೈಗಾರಿಕೆಯು ಕಳೆದ ವರ್ಷ ಶೇಕಡಾ 5ರಷ್ಟು ಸರಾಸರಿ ವೇಗದಲ್ಲಿ ಅಭಿವೃದ್ಧಿ ಹೊಂದಿದೆ ಎಂದು ಸರ್ಕಾರ ಕೊಟ್ಟ ಅಂಕಿ–ಸಂಖ್ಯೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಇದರಲ್ಲಿ ಆಡಳಿತ ದರಗಳು ಮತ್ತು ರಕ್ಷಣಾ ಉತ್ಪಾದನೆಗಳೇ ಈ ಹೆಚ್ಚಳದ ಬಹ್ವಂಶಕ್ಕೆ ಕಾರಣವಾಗಿದೆ. ಇದರಲ್ಲಿ ಸರ್ವಿಸುಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಅಂದರೆ ಸರ್ವ ಸಾಮಾನ್ಯವಾಗಿ ಕೈಗಾರಿಕೆಗಳು ಅಭಿವೃದ್ಧಿ ಹೊಂದಲಿಲ್ಲವೆಂದರ್ಥ.

ಮಂತ್ರಿಗಳೇ ಕೈಗಾರಿಕಾ ಬಂಡವಾಳಗಾರರು ಕೈಗಾರಿಕೆಯಲ್ಲಿ ತಮ್ಮ ಲಾಭದ ಹಣವನ್ನು ಪುನಃ ಹೂಡುವುದರ ಬದಲು, ಬೇರೆಡೆಗಳಿಗೆ ಲಾಭವನ್ನು ಒಯ್ಯುತ್ತಾರೆಂದು ಹೇಳುತ್ತಿದ್ದಾರೆ. ಅಂದರೆ ಕೈಗಾರಿಕೆಗಳಲ್ಲಿ ತಮ್ಮ ಹಣ ಹೂಡಲು ಖಾಸಗಿ ಬಂಡವಾಳಶಾಹಿಗಳಿಗೆ ಇನ್ನೂ ಧೈರ್ಯ ಬರಲಿಲ್ಲ !

(8ನೇ ಪುಟ ನೋಡಿ)

ರೈತರಿಗೆ ಲಾಭದಾಯಕ ಬೆಲೆ ಏಕೆ? ಹೇಗೆ?

ರೈತರು ಬೆಳೆದ ಫಸಲಿಗೆ ಲಾಭದಾಯಕ ಬೆಲೆ ನೀಡಬೇಕು ಎನ್ನುವುದನ್ನು 1978ರಿಂದ ಅಖಿಲ ಭಾರತ ಕಿಸಾನ್ ಸಭಾ ಸಾರುತ್ತಾ ಬಂದಿದೆ. ಅದಕ್ಕಾಗಿ ಅನೇಕ ಆರ್ಥಿಕ ತಜ್ಞರು ಹಾಗೂ ಸರ್ಕಾರಗಳಿಂದ ಕಿಸಾನ್ ಸಭಾ ಶ್ರೀಮಂತರ ಪರ ನಿಲುವು ತಳೆದಿದೆ ಎಂಬ ಅಪಪ್ರಚಾರವನ್ನು ಕೇಳಬೇಕಾಗಿ ಬಂದಿದೆ.

ಲಾಭದಾಯಕ ಬೆಲೆ ಎಂದರೆ ಎಷ್ಟು? ಈ ಲಾಭದಾಯಕ ಬೆಲೆ ಏಕೆ ಬೇಕು,ಏರಿಸದಿದ್ದರೆ ಪರಿಣಾಮವೇನು? ಎಂಬುದನ್ನು ವಿವೇಚಿಸೋಣ.

ಸೆಪ್ಟೆಂಬರ್‌ನ ಅಖಿಲ ಭಾರತ ಹೋರಾಟಕ್ಕೆ ಸಂಬಂಧಿಸಿ ಲಾಭದಾಯಕ ಬೆಲೆಗೆ ಸಂಬಂಧಿಸಿದಂತೆ ಕಿಸಾನ್ ಸಭಾ ಈ ಕೆಳಗಿನ ಬೇಡಿಕೆಗಳನ್ನು ಮುಂದಿಡುತ್ತದೆ.

1. ಕೃಷಿ ಫಸಲಿನ ಬೆಲೆ ಬೆಳೆಯುವ ವೆಚ್ಚದ ಏರಿಕೆಗೆ ತಕ್ಕಂತೆ ಏರಬೇಕು.

2. ಸಗಟು ವ್ಯಾಪಾರದ ಬೆಲೆಗಳಲ್ಲಿ ಆದ ಏರಿಕೆಯನ್ನು ಕೃಷಿ ಫಸಲಿನ ಬೆಲೆ ಸರಿ ತೂಗಿಸುವಂತಿರಬೇಕು.

3. ಸರ್ಕಾರಿ ಸಂಸ್ಥೆಗಳು ಸರಿಯಾದ ಸಮಯದಲ್ಲಿ ಮಾರುಕಟ್ಟೆಗೆ ಬಂದು ಘೋಷಿತ ಬೆಲೆಗೆ ಕೊಳ್ಳಬೇಕು.

4. ಇದಕ್ಕೆ ಅವಶ್ಯಕವಾದ ಹಣ ಸರ್ಕಾರ ಮೀಸಲಿಕ್ಕಸಬೇಕು. ಕೊಂಡ ಧಾನ್ಯವನಿರಿಸಲು ಉಗ್ರಾಣಗಳ ವ್ಯವಸ್ಥೆ ಮಾಡಬೇಕು.

ಈಗ ಎಲ್ಲಾ ರೈತರೂ ತಾವು ಬೆಳೆದ ಫಸಲಿನಲ್ಲಿ ಬಹು ಭಾಗವನ್ನು ಅದು ರೊಕ್ಕದ ಬೆಳೆಯಾಗಿದ್ದರೆ ಸರಿಸುಮಾರು ನೂರಕ್ಕೆ ನೂರು ಭಾಗ, ಆಹಾರ ಧಾನ್ಯಗಳ ಬೆಳೆಯಲ್ಲಿ ಕೂಡ ಬಹು ಭಾಗ, ಅದು ಕೇವಲ ಹೆಚ್ಚುಭೂಮಿ ಇದ್ದು ಹೆಚ್ಚು ಬೆಳೆಯುವ ಭೂಮಾಲೀಕರು ಮಾತ್ರವಲ್ಲ ಶ್ರೀಮಂತ ರೈತರಿಂದ ಸಣ್ಣರೈತರವರೆಗೂ ಎಲ್ಲರೂ ತಾವು ಬೆಳೆದ ಫಸಲಿನ ಬಹು ಭಾಗವನ್ನು ಮಾರುಕಟ್ಟೆಗೊಯ್ಯುತ್ತಾರೆ. ತಮ್ಮ ಮನೆಗೆ ಅಗತ್ಯವಾಗಿದ್ದರೂ ಇಟ್ಟುಕೊಳ್ಳದೆ ಮಾರಬೇಕಾಗಿ ಬರುತ್ತದೆ. ಹೀಗಾಗಿ ಎಲ್ಲರೂ ಮಾರುಕಟ್ಟೆಯ ತಿರುಗುಣಿಕ್ಕೆ ಸಿಕ್ಕಿಕೊಳ್ಳುತ್ತಾರೆ.

ಇಂತಹ ಪರಿಸ್ಥಿತಿಯಲ್ಲಿ ಲಾಭದಾಯಕ ಬೆಲೆ ಎಂಬುದು ಎಲ್ಲ ರೈತರಿಗೂ ಬೇಕಾದ ವಿಷಯ. ಮಾರುಕಟ್ಟೆಯಲ್ಲಿ ರೈತರು ಯಾವ ಬೆಲೆಗೆ ತಮ್ಮ ಫಸಲನ್ನು ಮಾರುತ್ತಾರೋ ಅದೇ ಪ್ರಮಾಣದ ಬೆಲೆಗೆ ಅವರಿಗೆ ಅವರು ಬಳಸುವ ವಸ್ತುಗಳು ಸಿಗಬೇಕು ಎಂಬುದು ಎಲ್ಲರೂ ಒಪ್ಪಬೇಕಾದ ಸಂಗತಿ. ಆದರೆ ನಮ್ಮ ದೇಶದಲ್ಲಿಂದು ಏನಾಗುತ್ತಿದೆ? ಕೃಷಿ ವಸ್ತುಗಳು ಹಾಗೂ ಕೃಷಿಯೇತರ ವಸ್ತುಗಳ ಬೆಲೆಗಳಲ್ಲಿ ಅಗಾಧ ಅಂತರವಿದೆ.

ಕೃಷಿಯ ಉತ್ಪಾದನೆಯ ಬಹುಭಾಗವನ್ನು ಉತ್ಪಾದಿಸುವವರು ಮಾರುವವರು ರೈತರಾದರೆ, ರೈತರಿಗೆ ಬೇಕಾದ ಕೃಷಿಯೇತರ ವಸ್ತುಗಳನ್ನು ಮಾರುವವರು ಬಂಡವಾಳಶಾಹಿಗಳು ಅವರು ಕೈಗಾರಿಕಾ ಬಂಡವಾಳಶಾಹಿಗಳಿರಬಹುದು ಅಥವಾ ವ್ಯಾಪಾರಿ ಬಂಡವಾಳಶಾಹಿಗಳಿರಬಹುದು. ಕೃಷಿಯ ವಸ್ತುಗಳನ್ನು ಉತ್ಪಾದನೆ ಮಾಡುವವರು. ಕೋಟ್ಯಾಂತರ ರೈತರಾದರೆ ಕೈಗಾರಿಕೆಯ ಬಹಳಷ್ಟು ವಸ್ತುಗಳನ್ನು ಉತ್ಪಾದನೆ ಮಾಡುವವರು ಹಿಡಿಯಷ್ಟು ಗುತ್ತೇದಾರಿ ಬಂಡವಾಳಶಾಹಿಗಳು.

ಜೊತೆಗೆ ರೈತರ ಉತ್ಪಾದನೆಯ ಬಹಳ ಭಾಗ ರೊಕ್ಕದ ಬೆಳೆಗಳಾದ ಹತ್ತಿ, ಕಬ್ಬು, ಸೆಣಬು, ಶೇಂಗಾ ಇವೆಲ್ಲಾ ಕೆಲವೇ ಜನ ಕೈಗಾರಿಕಾ ಮಾಲೀಕರು ಕೊಳ್ಳುವಂತಹದ್ದು ಆಹಾರಧಾನ್ಯಗಳನ್ನು ಕೊನೆಯಲ್ಲಿ ಬಳಸುವವರು ಅಸಂಖ್ಯಾತ ಜನಸಾಮಾನ್ಯರಾದರೂ ಮಧ್ಯವರ್ತಿಗಳು ದಲ್ಲಾಲರು, ಮಂಡಿಮಾಲೀಕರು ಕೆಲವರೇ ಹೀಗಾಗಿ ಮಾರುಕಟ್ಟೆಯ ಮೇಲೆ ರೈತರು ಮಾರುವ ವಸ್ತುಗಳ ಹಾಗೆಯೇ ರೈತರು ಕೊಳ್ಳುವ ವಸ್ತು ಮಾರುಕಟ್ಟೆಯ ಮೇಲೆ ಹಿಡಿತ ಏರಿಸಿಕೊಳ್ಳುವುದು ಅವರನ್ನು ತಮ್ಮ ಲಾಭಕ್ಕಾಗಿ ಆಟವಾಡಿಸುವುದು ಅವರಿಗೆ ಬಹುಸುಲಭ ಇದರ ಜೊತೆಗೆ ಸರಕಾರದ ಕೈವಾಡವೂ ಸೇರುತ್ತದೆ.

ಸೆಪ್ಟೆಂಬರ್ ರೈತ ಚಳುಳಿಯ ಎರಡನೇ ಪ್ರಮುಖ ಬೇಡಿಕೆ ಲಾಭದಾಯಕ ಬೆಲೆ. ಈ ಲಾಭದಾಯಕ ಬೆಲೆ ಎಂದರೇನು ? ರೈತರಿಗೆ ಆಗುತ್ತಿರುವ ಅನ್ಯಾಯವೇನು ? ವಿವೇಚಿಸಿದ್ದಾರೆ.

ಕಾ. ಬಿಪ್ಲವ್‌ದಾಸ್‌ಗುಪ್ತಾ

ಇವೆಲ್ಲದರ ಒಟ್ಟು ಪರಿಣಾಮವಾಗಿ ಕಳೆದ ಒಂದು ವರ್ಷದಲ್ಲಿ ರಸಗೊಬ್ಬರಗಳ ಬೆಲೆ ಶೇ% 10ರಷ್ಟು ಡೀಸೆಲ್ ಬೆಲೆ ಶೇ 3ರಷ್ಟು ಅನೇಕ ಕಡೆ ಹೊಸ ನೀರು ಗಂದಾಯಗಳು, ವಿದ್ಯುತ್ ದರದಲ್ಲಿ ಶೇ 67ರಷ್ಟುಏರಿದರೂ ಕೂಡ ಕೇಂದ್ರ ಸರ್ಕಾರ ಕೃಷಿ ಫಸಲಿಗೆ ನಿಗದಿ ಮಾಡುವ ಬೆಂಬಲ ಬೆಲೆಯಲ್ಲಿ ವರ್ಷದಿಂದ ವರ್ಷಕ್ಕೆ ಕೇವಲ ಶೇ 2ರಷ್ಟು ಏರುತ್ತದೆ. ಹೀಗಾದಾಗ ರೈತರು ಕಂಗಾಲಾಗುವುದರಲ್ಲಿ ಏನಾಶ್ಚರ್ಯ.

ಕೃಷಿ ವಸ್ತುಗಳು ಹಾಗೂ ಕೃಷಿಯೇತರ ವಸ್ತುಗಳ ನಡುವಣವಾಣಿಜ್ಯಕ್ಕೆ ಮತ್ತೊಂದು ಉದಾಹರಣೆ ಒಟ್ಟು ವಸ್ತುಗಳ ಸಗಟು ಬೆಲೆಯ ಸೂಚಿ ಶೇ 5.93 ರಷ್ಟು ಏರಿದರೆ ಆಹಾರ ಧಾನ್ಯಗಳ ಬೆಲೆ ಶೇ.0.53 ರಷ್ಟು ಇಳಿದಿದೆ. 1971-72 ರಿಂದ 1984-85ರವರೆಗೆ 13 ವರ್ಷಗಳ ಅವಧಿಯಲ್ಲಿ ರೈತರು ಉತ್ಪಾದಿಸುವ ವಸ್ತುಗಳ ಬೆಲೆ ಶೇ 28 ರಷ್ಟು ಏರಿದೆ. ಇವಿಷ್ಟು ಸರ್ಕಾರಿ ಅಂಕಿ ಅಂಶಗಳೇ.

ಇದಕ್ಕೆ ಏಕ ಮಾತ್ರ ಪರಿಹಾರವೆಂದರೆ ಸರಕಾರ ತನ್ನ ಸಂಸ್ಥೆಗಳಾದ ಆಹಾರ ನಿಗಮ (ಎಫ್.ಸಿ.ಐ.) ಹತ್ತಿ ನಿಗಮ (ಸಿ.ಸಿ.ಐ.) ಹಾಗೂ ನ್ಯಾಫೇಡ್‌ಗಳ ಮೂಲಕ ದೊಡ್ಡ ಪ್ರಮಾಣದಲ್ಲಿ ಸುಗ್ಗಿಯ ಆರಂಭದಲ್ಲಿಯೇ ಮಾರುಕಟ್ಟೆ ಪ್ರವೇಶಿಸಿ ನಿಶ್ಚಿತವಾದ, ಲಾಭಕರವಾದ ಬೆಂಬಲ ಬೆಲೆಗೆ ಕೊಳ್ಳಬೇಕು. ಇದಕ್ಕೆ ಈ ಸಂಸ್ಥೆಗಳಿಗೆ ಹಣ ಒದಗಿಸಬೇಕು. ಆದರೆ ಈಗ ನಮ್ಮ ದೇಶದ ಕೇಂದ್ರ ಸರ್ಕಾರ "ಹೊಸ ಆರ್ಥಿಕ ನೀತಿ" ಯ ಹೆಸರಿನಲ್ಲಿ ಈ ಸಂಸ್ಥೆಗಳಿಗೆ ನೀಡುತ್ತಿರುವ ಸಬ್ಸಿಡಿ ಇತ್ಯಾದಿ ರೂಪದ ಸಹಾಯವನ್ನು ಕಡಿತಗೊಳಿಸುತ್ತಿದೆ. ಕೊನೆಗೆ ಈ ನೀತಿ ಒಟ್ಟು ಭಾರ ಉತ್ಪಾದಕರಾದ ರೈತರು, ಬಳಕೆದಾರರಾದ ಕಾರ್ಮಿಕರು ಹಾಗೂ ನೌಕರರ ಮೇಲೆ ಬಿದ್ದರೆ ಈ ಸಂಸ್ಥೆಗಳಿಂದ ಹಿಂತೆಗೆದುಕೊಂಡ ಹಣ ಹತ್ತಿಗಿರಣಿ, ಸಣಬುಗಿರಣಿಗಳಿಗೆ ಹೊಸ ಯಂತ್ರಗಳನ್ನು ಖರೀದಿ ಮಾಡಲು ಸಹಾಯ ಧನವಾಗಿ ಹರಿಯುತ್ತಿದೆ.

ಈ ರೀತಿ ನೀವು ರೈತರ ಜೀವವನ್ನು ಹಿಂಡಲು ಬಿಡುವುದಿಲ್ಲ ಎಂದು ದನಿಯೆತ್ತಿ ಭಾರತದ ರೈತರು ಹೇಳಬೇಕಾಗಿದೆ. ಇದೇ ಸೆಪ್ಟೆಂಬರ್ ಚಳುವಳಿಯ ಹೂರಣ.

ಸಂಗ್ರಾನುವಾದ :
– ಜಿ. ಎನ್. ನಾಗರಾಜ್

ಕರ್ನಾಟಕದಲ್ಲಿ 'ಸಿ' ಮತ್ತು 'ಡಿ' ವರ್ಗದ ಜಮೀನು

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಜಿಲ್ಲೆ	ಒಟ್ಟು ಸರ್ಕಾರಿ ಬೀಳು ಭೂಮಿ	ಇದರಲ್ಲಿ ಮೋಜಣಿ ನಡೆಸಿದ್ದು	ಮೋಜಣಿ ನಡೆಸಿದ ಸರ್ಕಾರಿ ಭೂಮಿಯಲ್ಲಿ ಸಿ ಮತ್ತು ಡಿ ಭೂಮಿ		ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾಯಿಸಿರುವುದು		
			'ಸಿ' ವರ್ಗ	'ಡಿ' ವರ್ಗ	'ಸಿ' ವರ್ಗ	'ಡಿ' ವರ್ಗ	ಒಟ್ಟು
11. ಹಾಸನ	3,30,113	99,785	27,981	13,806	19,533	13,464	32,997
12. ಕೋಲಾರ	2,31,009	123877	32787	55156	21913	24135	46048
13. ಕೊಡಗು	78783	78783	37310	647	15825	1437	17262
14. ಮೈಸೂರು	4,37,464	96123	20127	5575	8689	2960	11649
15. ಮಂಡ್ಯ	2,13,207	42741	26605	17518	29009	17651	46660
16. ರಾಯಚೂರು	82,713	46525	31759	18378	57068	50360	107428
17. ಶಿವಮೊಗ್ಗ	4,77,295	106041	65961	5821	74674	5524	80198
18. ಉತ್ತರ ಕನ್ನಡ	3,70,881	117190	23611	4568	28255	23665	51920
19. ತುಮಕೂರು	13,791	13791	3017	739	221	16	237
ಒಟ್ಟು ಕರ್ನಾಟಕ	3622670	1485672	559146	312330	493659	266835	760512

ಸೆಪ್ಟೆಂಬರ್ ಚಳುವಳಿಗೆ ಸಿದ್ಧಗೊಳ್ಳುತ್ತಿರುವ ರೈತ ಸಂಘ

ಜೇವರ್ಗಿ ತಾಲ್ಲೂಕಿನ ಹರವಾಳ ಮಂಡಲ ಪಂಚಾಯತ್ ರೈತರ ವಿಸ್ತೃತ ಸಭೆಯನ್ನುಜುಲೈ7ರಂದು ಕರೆಯಲಾಗಿದ್ದು ಈ ಸಭೆಯಲ್ಲಿ ಸೆ.13ರ ಕಾರ್ಯಕ್ರಮದ ಯಶಸ್ವಿಗೊಳಿಸಲು ಕಾಲ್ನಡಿಗೆ ಜಾಥಾದಿಂದ ರೈತ ಸಂಘದ ಮುಖಂಡರು ಅರಳಗುಂಡಿ, ಕುರನಳ್ಳಿ, ಮುರಾಗಾನೂರ, ಮಂದವಾಲಿ,ಸೊನ್ನ ಮಂಡಲದಲ್ಲಿ ಜಾಥಾ ಮುಗಿಸಿ ಮಾತನಾಡಿದರು. ಆಗಸ್ಟ್ 10 ರಂದು ಕೃಷ್ಣಾ ಮೇಲ್ದಂಡೆ ಯೋಜನೆ ಶೀಘ್ರಗತಿಯಿಂದ ಪ್ರಾರಂಭಿಸಬೇಕೆಂದು ನಡೆಸಲಿರುವ ಪ್ರದರ್ಶನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಭಾಗವಹಿಸಬೇಕೆಂದು ಕರೆ ಕೊಟ್ಟರು.

24-7-87ರಂದು ಮಾವನೂರು ಸುತ್ತಮುತ್ತಲಿನ ಹಳ್ಳಿಗಳಾದ ಹಂಚಿನಾಳಎನ್, ಹೆಗ್ಗಿನಾಳ, ರ್‍ಯಾವನೂರ, ನಿರಲಕೊಡ, ಕಾಸಾರ ಬೋಸಗಾ ಗ್ರಾಮದ ರೈತರು ಸಭೆ ಸೇರಿ ಸೆ·13ರ ಕಾರ್ಯಕ್ರಮ ಯಶಸ್ವಿಗೊಳಿಸುವ ಬಗ್ಗೆ ಹಾಗೂ ಸ್ಥಳೀಯ ಸಮಸ್ಯೆ ಕುರಿತು ಚರ್ಚಿಸಿ ಕಾರ್ಯಕ್ರಮ ರೂಪಿಸಲಾಗಿದೆ.

ಆಳಂದ ತಾಲ್ಲೂಕಿನ ವಿ.ಕೆ.ಸಲಗರದಲ್ಲಿ 12-7-87ರಂದು ಸಭೆ ನಡೆಯಿತು. ಸೆ. 7ರಿಂದ 13ರವರೆಗೆ ನಡೆಯುವ ಕಾರ್ಯಕ್ರಮ ಯಶಸ್ವಿಗೊಳಿಸಲು 9 ಬೇಡಿಕೆಗಳನ್ನು ವಿವರಿಸಿ ಆಳಂದ ತಾಲ್ಲೂಕಿನ 7ಮಂಡಲಗಳ 47ಹಳ್ಳಿಗಳಲ್ಲಿ 10ದಿವಸ ಕಾಲು ಜಾಥಾ ನಡೆಸಿ, 5ಸಾವಿರ ಕರ ಪತ್ರ ಹೊರಡಿಸಲು ತೀರ್ಮಾನಿಸಲಾಯಿತು.

ಚಿತಾಪುರ ತಾಲ್ಲೂಕಿನ ಶಾಹಾಬಾದಿನಲ್ಲಿ 29-7-87ರಂದು ಸಭೆ ನಡೆಸಿ 9-8-87ರಿಂದ 16-8-87ರ ವರೆಗೆ ಸುಮಾರು 25 ಹಳ್ಳಿಗಳಿಗೆ 30 ಜನರನ್ನೊಳಗೊಂಡ ಸೈಕಲ್ ಜಾಥಾ ನಡೆಸಿ ಸೆ.13ರ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು.

29-7-87ರಂದು ಹೆಗ್ಗಿನಾಳ, ಹಂಚಿನಾಳ, ನೀರಲಕೋಡ್, ಮತ್ತು ವಿ.ಕೆ. ಬೋಸಗಾರು ಸುಮಾರಿನಿಂದ 200ರೈತರು ಕೃಷ್ಣಾ ಗ್ರಾಮೀಣ ಬ್ಯಾಂಕಿಗೆ ದತ್ತುಕೊಂಡು ಸಾಲ ಕೊಡಬೇಕೆಂದು ಘೋಷಣೆ ಕೂಗುತ್ತಾ ಜೇವರ್ಗಿ ತಾಲ್ಲೂಕಿನ ಕೃಷ್ಣಾ ಗ್ರಾಮೀಣ ಬ್ಯಾಂಕ್ ಎದುರುಗಡೆ ಧರಣಿ ಸತ್ಯಾಗ್ರಹ ನಡೆಸಿದರು.

ಮುಳಬಾಗಿಲು

ಜುಲೈ18ರಂದು ಹೆಬ್ಬಣಿಯಲ್ಲಿ ಹಾಗೂ ಆಗಸ್ಟ್2ರಂದು ಮುಳಬಾಗಿಲು ತಾಲ್ಲೂಕು ರೈತ ಸಂಘದ ಸಭೆ ಸೇರಿ ಸೆಪ್ಟೆಂಬರ್7–13ರ ಅಖಿಲ ಭಾರತ ಪಿಕೆಟಿಂಗ್ ಚಳುವಳಿಯನ್ನು ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು. ಈ ಪ್ರಯುಕ್ತ 12ಜನರ ಒಂದು ಕಾರ್ಯಕಾರಿ ಸಮಿತಿ ರಚಿಸಲಾಗಿದೆ. ಕಾ॥ ಗೋಪಾಲ್ ನೇತೃತ್ವ ವಹಿಸಲಿದ್ದಾರೆ.

ವ್ಯಾಪಕ ಪ್ರಚಾರ, ಕಾಲು ನಡಿಗೆ ಜಾಥ, ಸೈಕಲ್ ಜಾಥ, ಸಾರ್ವಜನಿಕ ಸಭೆ, ಗೋಡೆ ಬರಹಗಳ ಮೂಲಕ ಕಾರ್ಯಕ್ರಮ ಜಾರಿಗೊಳಿಸಲು ತೀರ್ಮಾನಿಸಲಾಗಿದೆ. ಈ ಸಭೆಯಲ್ಲಿ ಪಕ್ಷದ ಶಾಸಕರಾದ ಕಾ॥ ಆರ್. ವೆಂಕಟರಾಮಯ್ಯ, ವಕೀಲರಾದ ಕಾ॥ ಹೆಚ್. ಎನ್. ನಾಗಮೋಹನ ದಾಸ್, ಅಶ್ವಥನಾರಾಯಣ ರೆಡ್ಡಿಯವರುಗಳು ಭಾಗವಹಿಸಿ ಮಾರ್ಗದರ್ಶನ ನೀಡಿದರು.

ಶಾಸಕರ ಭ್ರಷ್ಟಾಚಾರ : ಹೆಗಡೆ ಉವಾಚ

ಹೆಗ್ಗಡೆಯವರು ಇತ್ತೀಚೆಗೆ ಸರ್ಕಾರದ ಭ್ರಷ್ಟಾಚಾರ, ಅದಕ್ಷತೆ ಬಗ್ಗೆ ಬಹಳ ಬಹಳ ಮಾತನ್ನಾಡುತ್ತಿದ್ದಾರೆ. ಸರ್ಕಾರದ ಅಧಿಕಾರಿಗಳಿಗೆ ಸುತ್ತೋಲೆ ಕಳುಹಿಸಿದ್ದಾಯಿತು. ಈಗ ಶಾಸಕರ ಭ್ರಷ್ಟಾಚಾರದ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು, ಅವರ ಮೇಲೆ ಬಂದಿರುವ ಆರೋಪಗಳನ್ನು(ಕೆಲ ಮಂತ್ರಿಗಳೂ ಸೇರಿ) ಲೋಕಾಯುಕ್ತರಿಗೆ ಒಪ್ಪಿಸುತ್ತೇವೆಂದು ಹೇಳುತ್ತಿದ್ದಾರೆ. ಈ ಕ್ರಮಗಳನ್ನು ಗಂಭೀರವಾಗಿ ಪರಿಗಣಿಸಿ ಕಾರ್ಯರೂಪಕ್ಕೆ ತಂದರಂತೂ ಸ್ವಾಗತಾರ್ಹ. ಆದರೆ ಅದು ಕೇವಲ ತಮ್ಮ ಪಕ್ಷದಲ್ಲಿ ಮಂತ್ರಿಮಂಡಲದ ವಿಸ್ತಾರ, ಸ್ವರೂಪದ ಬಗ್ಗೆ ಹಾಗೂ ಮಂತ್ರಿಮಂಡಲದ ಸದಸ್ಯರ ವಿರುದ್ಧ ಮಾಡುತ್ತಿರುವ ಆರೋಪಗಳನ್ನು ಅಡಗಿಸಲೆಂದು ಮಾತ್ರ ಈ ಮಾತುಗಳು ಬಂದುದಾದರೆ ಇದು ಮತ್ತೆ ಬಂಡವಾಳಶಾಹಿ ಭೂಮಾಲಕ ಪಕ್ಷಗಳಲ್ಲಿನ ಸಮಯಸಾಧಕತೆ ಎಂದೇ ವರ್ಣಿಸಬೇಕಾಗುತ್ತದೆ. ಬೃಹತ್ ಗಾತ್ರದ ಮಂತ್ರಿಮಂಡಲ, ಮಂತ್ರಿಮಂಡಲದೊಳಗಿನ ಭ್ರಷ್ಟಾಚಾರದ ಸಮಸ್ಯೆಗಳನ್ನು "ಮೌಲ್ಯಾಧಾರಿತವಾಗಿ ಎದುರಿಸುವುದರ ಬಗ್ಗೆ ಚಕಾರವೆತ್ತದ ಮುಖ್ಯಮಂತ್ರಿಯವರು, ವಿದ್ಯುತ್‌ದರ ಏರಿಕೆ, ಹಾಲಿನ ದರ ಏರಿಕೆ ಹಾಗೂ ಸರ್ವತ್ರ ಬೆಲೆ ಏರಿಕೆಗಳಂತಹ ಜನ ವಿರೋಧಿ

— ಕರ್ನಾಟಕ ರಾಜ್ಯದಲ್ಲಿ —

ಕ್ರಮಗಳಿಂದ ಜನತೆಗೆ ಉಂಟಾಗಿರುವ ಅಸಂತೃಪ್ತಿ, ಅಸಮಾಧಾನವನ್ನು ಪರಿಹರಿಸುವ, ಜನಪರ ಕ್ರಮಗಳನ್ನು ಕೈಬಿಟ್ಟು ಕೇವಲ ಬಾಯುಪಚಾರದಲ್ಲಿ, ಭ್ರಷ್ಟಾಚಾರವನ್ನು ನಿವಾರಿಸುವ ನೋಗಿನಲ್ಲಿ ಒಂದೇ ಏಟಿನಿಂದ ಎರಡು ಹಕ್ಕಿಯನ್ನು ಒಂದು ಪಕ್ಷದೊಳಗಿನ ಅಸಂತೃಪ್ತಿ ಮತ್ತೊಂದು ಜನರ ನಡುವೆ ಅಸಂತೃಪ್ತಿಯನ್ನು ಹೊಡೆಯಲು ಹೋದರೆ ಅದರಿಂದ ಜನತೆ ಮೋಸಹೋಗಲಾರದು ಇದರ ಜೊತೆಗೆ ಮತ್ತೊಂದು ಮಾತನ್ನಾಡಿದ್ದಾರೆ, ರಾಮಕೃಷ್ಣ ಹೆಗಡೆಯವರು. ಭ್ರಷ್ಟಾಚಾರವನ್ನು ನಿವಾರಿಸುತ್ತೇನೆಂದು ನಾನು ಹೇಳಿಲ್ಲ ಸೋವಿಯೆತ್ ದೇಶದಲ್ಲಿಯೂ ಭ್ರಷ್ಟಾಚಾರವಿದೆ ಎಂದೆಲ್ಲಾ ಗಳಹಿದ್ದಾರೆ.ಆದರೆ ಶ್ರೀಮತಿ ಇಂದಿರಾ ಗಾಂಧಿಯವರೂ ಕೂಡ ಇದೇ ಮಾತನ್ನು– ಭ್ರಷ್ಟಾಚಾರ ವಿಶ್ವವ್ಯಾಪಿಯಾದದ್ದು ಅದನ್ನು ನಾವು ಹೋಗಲಾಡಿಸಲು ಸಾಧ್ಯವಿಲ್ಲ- ಎಂದು ಹೇಳಿದಾಗ ರಾಜ್ಯಸಭೆ ಸದಸ್ಯರಾಗಿದ್ದ ಹೆಗ್ಗಡೆಯವರು ಏನು ಹೇಳಿದ್ದರೆಂಬುದು ಅವರಿಗೆ ಮರೆತು ಹೋಗಿದೆಯೇ ? ಸೋವಿಯೆತ್ ಒಕ್ಕೂಟದಲ್ಲಿ ಭ್ರಷ್ಟಾಚಾರ ಮುಕ್ತಸಮಾಜವಾದಿ ಸಮಾಜ ನಿರ್ಮಿಸಿದ ಹಲವು ವರ್ಷಗಳ ನಂತರ ಅಲ್ಲಲ್ಲಿ ಭ್ರಷ್ಟಾಚಾರ ನುಸುಳಿದ್ದದನ್ನು ಅಲ್ಲಿಯ ಇಂದಿನ ನಾಯಕತ್ವ ಹುಡುಕಿ ಹೊರತೆಗೆದು ಇಡೀ ಸಮಾಜದ ಮುಂದೆ ಬಹಿರಂಗವಾಗಿ ಸುಡುತ್ತಿರುವಾಗ ಈ ಮಾತಾಡುವುದು ಅವರ ಅಜ್ಞಾನವನ್ನು ಹೊರಗೆಡುಹುತ್ತದೆಯಷ್ಟೇ. ○

ಸಿ. ಐ. ಟಿ. ಯು. ರಾಜ್ಯ ಮಂಡಳಿ ಸಭೆ

ಜುಲೈ 28ರಿಂದ 30ರವರೆಗೆ ಮೈಸೂರಿನಲ್ಲಿ ಸೇರಿದ ಸಿ.ಐ.ಟಿ.ಯು. ರಾಜ್ಯ ಮಂಡಳಿ ಸಭೆ ರಾಷ್ಟ್ರ ಹಾಗೂ ಕರ್ನಾಟಕ ಕಾರ್ಮಿಕ ವರ್ಗ ಎದುರಿಸುತ್ತಿರುವ ಹಲವಾರು ಸಮಸ್ಯೆಗಳ ಕುರಿತು ಚರ್ಚಿಸಿತು. ವಿಶ್ವಶಾಂತಿಗಾಗಿ, ಅಮೇರಿಕನ್ ಸಾಮ್ರಾಜ್ಯಶಾಹಿಯ ಯುದ್ಧಕೋರ ನೀತಿಯ ವಿರುದ್ಧ ಜನ ಜಾಗೃತಿಗೊಳಿಸುವ ಕಾರ್ಯ ತೀವ್ರಗೊಳಿಸಬೇಕೆಂದೂ, ದೇಶದ ಸಮಗ್ರತೆಯನ್ನು ಕಾಪಾಡುವುದಕ್ಕಾಗಿ ಎಲ್ಲಾ ತರದ ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡಬೇಕೆಂದೂ, ಕೃಷಿ ಕ್ರಾಂತಿ ಸಾಧಿಸಲು ಸಹಾಯವಾಗುವಂತೆ ರೈತರ, ಕೃಷಿ ಕಾರ್ಮಿಕರ ಸಂಘಟನೆ, ಹೋರಾಟಗಳಿಗೆ ಮುಖಂಡತ್ವ ನೀಡಬೇಕೆಂದೂ, ಎಲ್ಲಾ ತರದ ಸಹಾಯ ಮಾಡಬೇಕೆಂದೂ,ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ.

ಈ ವರ್ಷ ಕೂಡ ಮಳೆಯ ಅಭಾವದಿಂದಾಗಿ ತೀವ್ರ ಬರಗಾಲ ಬೀಳುವ ಸಂಭವವಿರುವುದರಿಂದ ಈಗಿನಿಂದಲೇ ಸರ್ಕಾರ ಎಲ್ಲಾ ರಾಜಕೀಯ ಪಕ್ಷಗಳ ಮತ್ತು ಪ್ರಾಂತ ರೈತ ಸಂಘದ ಪ್ರತಿನಿಧಿಗಳನ್ನೊಳಗೊಂಡ ಕಮಿಟಿ ನೇಮಿಸಿ ಅದರ ಸಲಹೆಯಂತೆ ಕಾರ್ಯಕ್ರಮ ಕೈಗೊಳ್ಳಬೇಕೆಂದು ಸಲಹೆ ನೀಡಿದೆ. ಹುಬ್ಬಳ್ಳಿ–ಧಾರವಾಡ ಪ್ರದೇಶದಲ್ಲಿ ಇ.ಎಸ್.ಐ.ಯ ಅವ್ಯವಸ್ಥೆ,ಪ್ಲ್ಯಾಯ್‌ವುಡ್ ಮತ್ತು ರಾಯಚೂರು ಥರ್ಮಲ್ ಘಟಕಗಳಲ್ಲಿಯ ಕಂಟ್ರಾಕ್ಟ್ ಕೆಲಸಗಾರರ ಹೋರಾಟಗಳಿಗೆ ಬೆಂಬಲ,ಯುನೈಟೆಡ್ ಬ್ರೂವರೀಸ್ ಮಾಲೀಕ ವರ್ಗ ಕಾರ್ಮಿಕರ ಮೇಲೆ ನಡೆಸುತ್ತಿರುವ ದಬ್ಬಾಳಿಕೆ, ಸಾರಿಗೆ ಕೆಲಸಗಾರರ ಬೇಡಿಕೆಗಳ ಸಪ್ತಾಹಕ್ಕೆ ಬೆಂಬಲ, ಎನ್.ಜಿ.ಇ.ಎಫ್. ಕಂಪನಿಯ ಶೇರುಗಳನ್ನು ಜರ್ಮನ್ ಕಂಪನಿಗೆ ಮಾರಾಟ ಮಾಡುತ್ತಿರುವುದಕ್ಕೆ ವಿರೋಧ ಹಾಗೆಯೇ ಬೆಳೆಯುತ್ತಿರುವ ನಿರುದ್ಯೋಗ ಸಮಸ್ಯೆ ಕುರಿತು ಮತ್ತು ಅಸಂಘಟಿತ ಕಾರ್ಮಿಕರ ಸಂಘಟನೆಯ ಕುರಿತು ನಿರ್ಣಯ ಮಾಡಲಾಯಿತು. ○

ಆಗಸ್ಟ 15 : ಕೇರಳದಲ್ಲಿ ಮಾನವ ಸರಪಳಿ ರಚನೆ

ಆಗಸ್ಟ 15ರ 40ನೇಸ್ವಾತಂತ್ರ್ಯ ದಿನೋತ್ಸವದಂದು ಕೇರಳದ ಡಿ.ವೈ.ಎಫ್.ಐ. ನಾವು ಹುಟ್ಟಿದ ಈ ನಾಡನ್ನು ಛಿದ್ರೀಕರಿಸಲು ಬಿಡುವುದಿಲ್ಲವೆಂದು ಘೋಷಿಸಿ ಕಾಸರಗೋಡಿನಿಂದ ಕನ್ಯಾಕುಮಾರಿಯವರೆಗೆ 700ಕಿ.ಮೀ ದೂರ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಾನವ ಸರಪಳಿ ನಿರ್ಮಿಸಲ್ಲಿದ್ದಾರೆ. ರಾಷ್ಟ್ರೀಯ ಹೆದ್ದಾರಿಯಿಲ್ಲದ ಎರಡು ಜಿಲ್ಲೆಗಳಲ್ಲಿ ಪ್ರತಿಜ್ಞಾ ದಿನವಾಗಿ ಸ್ವಾತಂತ್ರ್ಯ ದಿನವನ್ನು ಆಚರಿಸಲಿದ್ದಾರೆ. ಅಂದು ನಾಲ್ಕು ಗಂಟೆಗೆ ಸೊಂಟದ ಮೇಲಿಟ್ಟುಕೊಂಡ ಕೈಯಲ್ಲಿ ಕೈತೂರಿಸಿ ರಚಿಸಲಿರುವ ಈ ಮಾನವ ಸರಪಳಿಯಲ್ಲಿ ಭಾಗವಹಿಸಲು ತಮಗೂ ಅವಕಾಶ ನೀಡಬೇಕೆಂದು ಅನೇಕ ಸ್ವಾತಂತ್ರ್ಯ ಹೋರಾಟಗಾರರು ಡಿ.ವೈ.ಎಫ್.ಐ.ಯನ್ನು ಕೋರಿದ್ದಾರೆ. 5 ಲಕ್ಷ ಯುವಕರು ಭಾಗವಹಿಸಬೇಕೆಂದು ಗುರಿ ಹಾಕಿಕೊಳ್ಳಲಾಗಿದ್ದ ಈ ಕಾರ್ಯಕ್ರಮದಲ್ಲಿ ಮತ್ತೆ ಹಲವಾರು ಲಕ್ಷ ಜನರು ಭಾಗವಹಿಸಲು ಮುಂದೆ ಬಂದಿದ್ದಾರೆ. ಇದರಿಂದ ಮಾನವ ಸರಪಳಿ ಹೋಗಿ ಮಾನವ ಗೋಡೆಯನ್ನೇ ನಿರ್ಮಿಸಬೇಕಾದ ಪರಿಸ್ಥಿತಿ ಬಂದಿದೆಯೆಂದು ತಿಳಿದು ಬಂದಿದೆ.

"ಮುಂಗಾರು"ವಿನಲ್ಲಿ ವರದಿಯಾದ ಹೆಚ್ಚಿನಶಂಗಳು ತಿರುವನಂತಪುರದ ಗಳಂಧಿ ಪಾರ್ಕಿನಿಂದ, ಕಳೆದ ವರ್ಷ ನಿರುದ್ಯೋಗ ಸಮಸ್ಯೆಯ ವಿರುದ್ಧ ಹೋರಾಟದಲ್ಲಿ ಬಾಲಕೃಷ್ಣ ಎಂಬ ಕಾರ್ಯಕರ್ತನು ಮಡಿದ ಕಾಸರಗೋಡಿನ ಒಂದು ಹಳ್ಳಿಯವರೆಗೆ ಕೈಹಿಡಿದು ನಿಲ್ಲಲಿರುವ ಈ ಮನುಷ್ಯರ ಸರಪಳಿಚಳುವಳಿಯಲ್ಲಿ ಒಟ್ಟು 8ಲಕ್ಷಡಿ.ವೈ.ಎಫ್.ಐ. ಕಾರ್ಯಕರ್ತರು ಭಾಗವಹಿಸಲಿದ್ದಾರೆ.

ಈ ಕಾರ್ಯಕ್ರಮಕ್ಕೆ ಬೆಂಬಲ ವ್ಯಕ್ತಪಡಿಸಿ ಮಂಜೇಶ್ವರ ಸಮಿತಿ ಜುಲೈ30ರಿಂದ ಆಗಸ್ಟ 6ರ ವರೆಗೆ ಕಾಲ್ನಡಿಗೆ ಜಾಥಾ ಏರ್ಪಡಿಸಿದೆ. ಇತ್ತೀಚೆಗೆ ಉಪ್ಪಳ ಸಮೀಪದ ಬೋವಿ ಶಾಲೆಯಲ್ಲಿ ನಡೆದ ಸಭೆಯಲ್ಲಿ ಈ ಜಾಥಾವನ್ನು ಯಶಸ್ವಿಗೊಳಿಸಲು ನಿರ್ಧರಿಸಲಾಯಿತು. ಬಿ. ಲೋಕನಾಥ್‌ರವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಕಾಸರಗೋಡು ಜಿಲ್ಲಾ ಅಧ್ಯಕ್ಷ ಕುಂಞಂಬು ಕಾರ್ಯದರ್ಶಿ ಸತೀಶ್ಚಂದ್ರ ದ.ಕ. ಜಿಲ್ಲಾ ಅಧ್ಯಕ್ಷ ಬಿ.ಎಂ.ಮಾಧವ ಮೊದಲಾದವರು ಭಾಗವಹಿಸಿದ್ದರು.

ಡಿ. ವೈ. ಎಫ್. ಐ. ಕೇಂದ್ರದ ತೀರ್ಮಾನ
ದೆಹಲಿಯಲ್ಲಿ ಬೃಹತ್ ರ್‍ಯಾಲಿ

ಡಿ.ವೈ.ಎಫ್.ಐ.ನ ಕೇಂದ್ರ ಸಮಿತಿಯ ಸಭೆ ಜುಲೈ 7ರಿಂದ 9ರವರೆಗೆ ಸಿಮ್ಲಾದಲ್ಲಿ ನಡೆಯಿತು.ದೇಶದ ಐಕ್ಯತೆಗಾಗಿನ ಹೋರಾಟದಲ್ಲಿ ಹುತಾತ್ಮರಾದ ಪಂಜಾಬಿನ ಡಿ.ವೈ.ಎಫ್.ಐ. ಅಧ್ಯಕ್ಷರಾಗಿದ್ದ ಕಾ.ಗುರುನಾಮ್‌ಸಿಂಗ್ ಅವರಿಗೂ, ಖಲಿಸ್ತಾನೀ ಭಯೋತ್ಪಾದಕರ ಪೈಶಾಚಿಕ ಕೃತ್ಯಕ್ಕೆ ಬಲಿಯಾದ ಬಸ್ ಪ್ರಯಾಣಿಕರಿಗೂ ಸಭೆ ಶ್ರದ್ಧಾಂಜಲಿ ಅರ್ಪಿಸಿತು.

ಆಗಸ್ಟ 6ರಿಂದ 9ರವರೆಗೆ ಹಿರೋಶಿಮಾ ನಾಗಸಾಕಿ ದಿನವನ್ನು, ಆಗಸ್ಟ 15ರ 40ನೇ ಸ್ವಾತಂತ್ರ್ಯ ದಿನಾಚರಣೆಯನ್ನು 'ಪ್ರಜಾಪ್ರಭುತ್ವ ರಕ್ಷಿಸಿ' ದಿನವನ್ನಾಗಿ ಆಚರಿಸಬೇಕೆಂದೂ ಸಭೆ ತೀರ್ಮಾನಿಸಿತು.

'ಎಲ್ಲರಿಗೂ ಶಿಕ್ಷಣ ಎಲ್ಲರಿಗೂ ಉದ್ಯೋಗ' ದ ಬೇಡಿಕೆಗಾಗಿ ಸೆಪ್ಟಂಬರ್ 23ರಂದು ಎಸ್.ಎಫ್.ಐ.ನ ಜೊತೆಗೂಡಿ ದೆಹಲಿಯಲ್ಲಿ ರಾಷ್ಟ್ರಮಟ್ಟದ ರ್‍ಯಾಲಿಯನ್ನು ನಡೆಸಬೇಕೆಂದೂ ಅದನ್ನೊಂದು ಚರಿತ್ರಾರ್ಹ ಕಾರ್ಯಕ್ರಮವನ್ನಾಗಿ ಮಾಡಬೇಕೆಂದೂ ಸಭೆ ತೀರ್ಮಾನಿಸಿದೆ.

ಡಿ.ವೈ ಎಫ್.ಐ.ನ 3ನೇ ಅಖಿಲ ಭಾರತ ಸಮ್ಮೇಳನ ಡಿಸೆಂಬರ್ 15 ರಿಂದ 19ರವರೆಗೆ ಮದರಾಸ್‌ನಲ್ಲಿ ನಡೆಯುತ್ತದೆ. ಕರ್ನಾಟಕ,ಕೇರಳ ಮತ್ತು ಆಂಧ್ರ ಪ್ರದೇಶಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಯುವಜನರು 19ರ ಬಹಿರಂಗ ಸಭೆಯಲ್ಲಿ ಭಾಗವಹಿಸಬೇಕೆಂದು ಡಿ.ವೈ.ಎಫ್.ಐ. ಕರೆ ನೀಡಿದೆ. ○

"ರೈತ ಚಳುವಳಿ ಯಶಸ್ವಿಗೊಳಿಸಿರಿ" —ಸಿ.ಐ.ಟಿ.ಯು. ಕರೆ

ತಮ್ಮ ಹನ್ನೆರಡು ಬೇಡಿಕೆಗಳಿಗಾಗಿ ಅಖಿಲ ಭಾರತ ಕಿಸಾನ್ ಸಭಾದ ನೇತೃತ್ವದಲ್ಲಿ 1987 ಸೆಪ್ಟೆಂಬರ್ 7 ರಿಂದ 13ರ ವರೆಗೆ ನಡೆಯಲಿರುವ ರೈತ ಮತ್ತು ಕೃಷಿಕಾರ್ಮಿಕರ ರಾಜ್ಯವ್ಯಾಪಿ ಪಿಕೆಟಿಂಗ್ ಚಳುವಳಿಗೆ ಜುಲೈ 28 ರಿಂದ 30ರ ವರೆಗೆ ಮೈಸೂರಿನಲ್ಲಿ ಸೇರಿದ ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಮಂಡಲಿ ಸಭೆ ಸಂಪೂರ್ಣ ಬೆಂಬಲವನ್ನು ವ್ಯಕ್ತ ಪಡಿಸಿದೆ. ಮಾತ್ರವಲ್ಲ ರೈತ-ಕಾರ್ಮಿಕರ ಐಕ್ಯತೆಯನ್ನು ಬಲಗೊಳಿಸಿ ಕೃಷಿಕರ ಕ್ರಾಂತಿಯತ್ತ ಮುಂದೆ ಸಾಗಲು ಸಹಾಯವಾಗುವಂತೆ, ರೈತರ ಕೃಷಿಕಾರ್ಮಿಕರ ಬಹುದಿನದ ಬೇಡಿಕೆಗಳು ಈಡೇರುವಂತೆ ಮಾಡಲು ಧನಸಹಾಯ ಮಾಡುವುದಷ್ಟೇ ಅಲ್ಲ, ಸೆಪ್ಟೆಂಬರ್ 7ರಂದು ಸಾರ್ವತ್ರಿಕ ಮುಷ್ಕರ ಹೂಡಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ರೈತರೊಡನೆ ಸೇರಿಕೊಂಡು ಪಿಕೆಟಿಂಗ್‌ನಲ್ಲಿ ಭಾಗವಹಿಸಬೇಕೆಂದು ರಾಜ್ಯಮಂಡಳಿಯು ಕರ್ನಾಟಕದ ಕಾರ್ಮಿಕರಿಗೆ ಕರೆ ನೀಡಿದೆ.

ಸ್ವಾತಂತ್ರ್ಯ ಪಡೆದು ನಲ್ವತ್ತು ವರ್ಷಗಳಾದರೂ ಕೂಡ ಕಾಂಗ್ರೆಸ ಸರಕಾರ ರೈತರ ಮೂಲಭೂತ ಪ್ರಶ್ನೆಯನ್ನು ಕೃಷಿ ಕಾರ್ಮಿಕರ ಬೇಡಿಕೆಗಳನ್ನಾಗಲಿ ಸಮರ್ಪಕವಾಗಿ ಬಗೆಹರಿಸುವುದರಲ್ಲಿ ವಿಫಲಗೊಂಡಿದೆ. ಅಪಾರ ತ್ಯಾಗ, ಬಲಿದಾನಗಳಿಂದಾಗಿ ಕೆಲವು ಬೇಡಿಕೆಗಳನ್ನು ಪಡೆಯಲು ಸಾಧ್ಯವಾಗಿದೆ. ಆದರೆ ಭೂಪರಿಮಿತಿಗಿಂತ ಹೆಚ್ಚಿಗಿನ ಭೂಮಿಯನ್ನು ಭೂಹೀನರಿಗೆ ಹಂಚುವ ಪಶ್ಚಿಮ ಬಂಗಾಲದ ಭೂ ಮಸೂದೆಯಂತೆ ದೇಶದ ಇತರ ರಾಜ್ಯಗಳಲ್ಲಿಯೂ ಭೂಸುಧಾರಣೆಜಾರಿ ಮಾಡುವ' ಒಕ್ಕಲೆಬ್ಬಿಸುವುದನ್ನು ತಡೆಯುವ, ಭೂಮಿಯ ದ ಖಲೆಯನ್ನು ಪೂರ್ತಿಗೊಳಿಸುವ ಮೊದಲಾದ ಬೇಡಿಕೆಗಳಲ್ಲದೆ ಕರ್ನಾಟಕ ರಾಜ್ಯದಲ್ಲಿ ನೀರಾವರಿ ಯೋಜನೆಗಳು ಬರಪರಿಹಾರ ಕಾರ್ಯಗಳೆಲ್ಲ ಕಾರ್ಯರೂಪದಲ್ಲಿ ತರಲು ಒತ್ತಾಯ ಅಗತ್ಯವಾಗಿದೆ. ಆದ್ದರಿಂದ ರಾಜ್ಯವ್ಯಾಪಿ ನಡೆಯುವ ಈ ಹೋರಾಟದಲ್ಲಿ ಭಾಗವಹಿಸಿಅದನ್ನು ಯಶಸ್ವಿಗೊಳಿಸಿ ರೈತ–ಕಾರ್ಮಿಕರ ಐಕ್ಯತೆಯನ್ನು ಬಲಗೊಳಿಸಬೇಕೆಂದು ರಾಜ್ಯ ಮಂಡಲಿ ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ.

ಬೀಡಿ ಕಾರ್ಮಿಕರಿಂದ ಮನೆ ನಿವೇಶನಕ್ಕಾಗಿ ಹೋರಾಟ

ಹರಿಹರದ ನಿವೇಶನ ರಹಿತ ಬೀಡಿ ಕಾರ್ಮಿಕರಿಗೆ ಮನೆ ನಿವೇಶನ ಒದಗಿಸಬೇಕೆಂದು ಒತ್ತಾಯಿಸಿ ಜುಲೈ 15 ರಂದು ಪುರಸಭೆ ಕಛೇರಿ ಮುಂದೆ ಪ್ರದರ್ಶನ ನಡೆಸಿ ಪುರ ಸಭೆಯ ಉಪಾಧ್ಯಕ್ಷರಾದ ಶ್ರೀ ಡಿ. ಯಮುನಪ್ಪನವರಿಗೆ ಮನವಿ ಅರ್ಪಿಸಲಾಯಿತು. ಅವರು ಪ್ರದರ್ಶನಕಾರರನ್ನುದ್ದೇಶಿಸಿ ಮಾತನಾಡಿ ಪುರ ಸಭೆ ಈಗಾಗಲೇ 80ಎಕರೆ ಖಾಸಗೀ ಜಮೀನನ್ನು ಸ್ವಾದೀನಪಡಿಸಿಕೊಳ್ಳಲು ಕ್ರಮ ಕೈಗೊಂಡಿದ್ದು ಅಧ್ಯತೆಯ ಮೇರೆಗೆ ಮನೆ ನಿವೇಶನಗಳನ್ನು ನೀಡಲಾಗುವುದೆಂದು ಭರವಸೆ ನೀಡಿದರು. ಈ ಕುರಿತು ಸಿ.ಪಿ.ಐ [ಎಂ[ಶಾಸಕರಾದ ಕಾ। ಆರ್. ವೆಂಕಟರಾಮಯ್ಯನವರು ವಿಧಾನ ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಸಚಿವ ಅಬ್ದುಲ್ ನಜೀರ್‌ಸಾಬ್‌ರವರನ್ನು ಒತ್ತಾಯಿಸಿದ್ದರು. ಲಭ್ಯವಿರುವ ಪುರ ಸಭೆ ಜಮೀನನು ಬೀಡಿ ಕಾರ್ಮಿಕರಿಗೆ ನಿವೇಶನ ಕಟ್ಟಲು ನೀಡಬೇಕು, ಖಾಸಗೀ ಜಮೀನನ್ನು ಸ್ವಾದೀನಪಡಿಸಿಕೊಂಡು ಅದರಲ್ಲಿ ನಿವೇಶನ ಹಂಚಬೇಕು, ಬಡವರು ಕಟ್ಟಿರುವ ಮನೆಗಳಿಗೆ ಹಕ್ಕು ಪತ್ರಗಳನ್ನು ಕೊಟ್ಟು ಸಕ್ರಮಗೊಳಿಸಬೇಕು ಹಾಗೂ ಭಾಗ್ಯಮಂದಿರ ಯೋಜನೆಯಲ್ಲಿ ಮನೆ ಕಟ್ಟಲು ಸಾಲ ಪಡೆದವರಿಗೆ ಸಾಲ ಮನ್ನಾ ಮಾಡಬೇಕೆಂದು ಪ್ರಮುಖವಾದ ಬೇಡಿಕೆಯಾಗಿವೆ.

ಕೇವಲ ಆಶ್ವಾಸನೆಗಳಿಂದ ತೃಪ್ತರಾಗದೆ ಮನೆ ನಿವೇಶಗಳು ದೊರಕುವವರೆಗೆ ಹಂತವಾಗಿ ಹೋರಾಟವನ್ನು ತೀವ್ರ ಗೊಳಿಸಲು ಹರಿಹರ ತಾಲ್ಲೂಕ್ ಬೀಡಿ ಕೆಲಸಗಾರರ ಸಂಘ ತೀರ್ಮಾನಿಸಿದೆ. ಪ್ರದರ್ಶನಕಾರರಲ್ಲಿ ಬುರ್ಕಾ ಧರಿಸಿದ್ದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದು ಒಂದು ವೈಶಿಷ್ಟ್ಯವಾಗಿತ್ತು. ಕಾ। ಎನ್. ಜಿ. ಪಠಾಣ, ನಿತ್ಯಾನಂದ ಸ್ವಾಮಿ, ಅನ್ವರ್‌ಸಾಬ್,ಅಮೀನಾ ಬಿ, ಮೆಹರುನ್‌ಬಿ ಮತ್ತು ರಜಿಯಾಬಿ ಯವರುಗಳು ನೇತೃತ್ವವಹಿಸಿದ್ದರು.

ಸಾಲ ಮೇಳ ! ಸಾಲ ಮೇಳ !!

– ಸ್ಕಂದ

ಒಂದು ಸಾಲ ಮೇಳ,ಸಾಲಮೇಳಗಳ ಮಂತ್ರಿಯೆಂದೇ ಹೆಸರು ಪಡೆದಿರುವ ಜನಾರ್ಧನ ಪೂಜಾರಿಯವರ ಆಗಮನ. ಸಭಾ ವೇದಿಕೆಗೆ ಬರುತ್ತಿರುವಂತೆಯೇ ಪೂಜಾರಿಯವರು ತಮ್ಮ ಭಾಷಣವನ್ನು ಆರಂಭಿಸುತ್ತಾರೆ.ನಮ್ಮ ಹಳ್ಳಿಯ ಜನರನ್ನು ಬಡತನ ಕಿತ್ತು ತಿನ್ನುತ್ತಿದೆ. ಅವರನ್ನು ಕೇಳುವವರು ಯಾರೂ ಇಲ್ಲ. ಇದು ನಮ್ಮ ಅಮ್ಮನವರಿಗೆ ಗೊತ್ತಿತ್ತು. ಅವರು ಈ ಬಡ ಜನರ ಕಷ್ಟಸುಖಗಳನ್ನು ಅರಿತ್ತಿದ್ದರು. ಅವರಿಗೆ ಸಹಾಯ ಮಾಡಲೇಬೇಕೆಂದು ದೃಢ ಸಂಕಲ್ಪ ಮಾಡಿದರು. ನಾನು ಮಂತ್ರಿಯಾದಾಗ ನನ್ನನ್ನು ಕರೆದು ನಮ್ಮ ಇಂದಿರಮ್ಮನವರು ಹೇಳಿದರು– 'ಪೂಜಾರಿಯವರೇ ಈ ಬಡಜನರ ಗೋಳು ಕೇಳುವವರಿಲ್ಲ. ಅವರಿಗೆ ನೀವು ಸಹಾಯ ಮಾಡಿ. ಈ ಬ್ಯಾಂಕಿನ ಅಧಿಕಾರಿಗಳು ಅವರಿಗೆ ಸಾಲ ನೀಡುತ್ತಿಲ್ಲ. ಅವರಿಗೆ ಸಾಲ ಕೊಡಿಸಿ' ಎಂದರು.ಅಂದಿನಿಂದ ಸಾಲ ಮೇಳಗಳು ನಡೆಯುತ್ತಲೇ ಇವೆ. ಇದಕ್ಕೆ ಅಡ್ಡಿ ಪಡಿಸುವವರು ಹಲವರು ಇದ್ದಾರೆ. ಮದ್ರಾಸಿನಲ್ಲೊಂದು ಸಾಲಮೇಳ ಮುಗಿಸಿ ಬರುತ್ತಿದ್ದಾಗ ನನ್ನ ಕಾಲಿಗೆ ಅಪಘಾತವಾಯಿತು. ಅದು ಆಕಸ್ಮಿಕವಾಗಿರಲಿಲ್ಲ. ನನ್ನ ಕೊಲೆ ಮಾಡುವುದು ಅವರಉದ್ದೇಶವಾಗಿತ್ತು. ಆದರೆ ಇಂತಹ ಅಡ್ಡಿಗಳು ಹಲವಾರು. ಆದರೆ ನನ್ನ ದೇಹದ ರಕ್ತದಲ್ಲಿ ಕೊನೆಯ ಹನಿಗೆ ಜೀವವಿರುವವರೆವಿಗೂ ನಾನು ಸಾಲ ಮೇಳಗಳನ್ನು ನಡೆಸೇತ್ತೀರುತ್ತೇನೆ. ಬಡಜನರಿಗಾಗಿ ನಾನು ಮಾಡುವ ಈ ಕೆಲಸವನ್ನು ಯಾರೂ ತಡೆಯಲಾರರು ಸಭೆಯಲ್ಲಿ ವೇದಿಕೆಯಿಂದ ಪ್ರಾರಂಭವಾಗಿ ಕರತಾಡನವಾಗುತ್ತದೆ.

ಹೀಗೆ ಅಮ್ಮನವರ ಕೀರ್ತನೆಯ ಜೊತೆಗೇ ಅವರು ವಿರೋಧ ಪಕ್ಷದವರನ್ನು ಜರೆಯುತ್ತಾರೆ. ಭಾಷಣದ ನಡುವೆ ನಮ್ಮ ಬಡಜನರ ಪರಿಸ್ಥಿತಿಯ ಬಗ್ಗೆ ಪೂಜಾರಿಯವರಿಗೆ ಕರುಣೆ ಉಕ್ಕಿ ಬರುತ್ತದೆ. ವೇದಿಕೆಗೆ ಹತ್ತಿರವಿರುವ ಬ್ಯಾಂಕ್ ಮ್ಯಾನೇಜರ್ ಒಬ್ಬರನ್ನು ಪೂಜಾರಿ ಕರೆಯುತ್ತಾರೆ. ಅವರನ್ನು ಪ್ರಶ್ನಿಸುತ್ತಾರೆ. ನಿಮ್ಮಸಂಬಳವೆಷ್ಟು? ನಾಲ್ಕು ಸಾವಿರವೆಂದು ಮೇಲು ಧ್ವನಿಯ ಉತ್ತರ ಬರುತ್ತದೆ. ಪೂಜಾರಿ ಧ್ವನಿವರ್ಧಕದಲ್ಲಿ ಅದನ್ನು ಜೋರಾಗಿ ಕೂಗಿ ಹೇಳುತ್ತಾರೆ. ಬ್ಯಾಂಕ್ ಅಧಿಕಾಗಳಿಗಿರುವ ಇನ್ನೂ ಹಲವು ಸೌಲಭ್ಯಗಳಬಗ್ಗೆ ಕೇಳುತ್ತಾರೆ. ಅನಂತರ ಬ್ಯಾಂಕ್ ಅಧಿಕಾರಿಗಳ ಮೇಲೆ ಟೀಕೆಯ ಸುರಿಮಳೆಯಾಗುತ್ತದೆ. "ಇಷ್ಟೊಂದು ಸಂಬಳ ಪಡೆವ ಇಷ್ಟೊಂದು ಸೌಲಭ್ಯಗಳನ್ನು ಪಡೆವ ಈ ಅಧಿಕಾರಿಗಳು ಬಡಜನ ಬಂದರೆ ಅವರನ್ನು ಮಾತನಾಡಿಸುವುದಿಲ್ಲ. ಅವರು ಸಾಲ ಕೇಳಿದರೆ ಇಲ್ಲವೆನ್ನುತ್ತಾರೆ. ಜಾಮೀನು ಕೇಳುತ್ತಾರೆ. ಆದರೆ ನಮ್ಮ ಬಡವರಿಗೆ ಜಾಮೀನು ಕೊಡುವವರಾರು ? ಇದನ್ನು ನಾವು ನೋಡಿದೆವು. ನಾನು ಅಮ್ಮನವರ ಜೊತೆಗೆ ಮಾತನಾಡಿದೆ. ಅಮ್ಮನವರು ಹೇಳಿದರು ಬಡಜನರ ಸಾಲಗಳಿಗೆ ನಾನು ನನ್ನ ಸರ್ಕಾರ ಜಾಮೀನು ನಿಲ್ಲುತ್ತದೆ. ಇನ್ನು ಮುಂದೆ ಬ್ಯಾಂಕಿನವರು ಬಡಜನರಿಗೆ ಸಾಲ ನೀಡುವಾಗ ಜಾಮೀನು ಕೇಳಕೂಡದು" ಅಮ್ಮನವರು ಸತ್ತ ಬಗ್ಗೆ ದುಃಖ (ಪೂಜಾರಿಯವರು ಮಾತನಾಡಲಾರದಷ್ಟು ಗದ್ಗದಿತರಾಗುತ್ತಾರೆ) ಹೀಗೆ ಕೆಲವೊಮ್ಮೆ ನಾಟಕ, ಅಳು ಇತ್ಯಾದಿಗಳಿಂದ ಅವರ ಭಾಷಣ ರಂಜನೀಯವಾಗಿರುತ್ತದೆ.

ಸಾಲ ವಿತರಣೆಯ ಈ ಸಮಾರಂಭದ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗುತ್ತಲೇ ಇರುತ್ತವೆ. ಈ ಸಮಾರಂಭ ಸಾಲಮೇಳದ ಒಂದು ಭಾಗವಷ್ಟೇ. ಅದಕ್ಕೆ ಹಿಂದಿನ ತಯಾರಿ, ಅದರ ನಂತರದ ಘಟನಾವಳಿಗಳಿಗೆ ಪತ್ರಿಕೆಗಳಲ್ಲಿ ಸ್ಥಳ ಕಾಣುವುದಿಲ್ಲ.

ಯಾವುದೇ ಒಂದು ಪ್ರದೇಶದ ಪ್ರಭಾವಿ ಅಥವಾ ಪೂಜಾರಿಯವರ ಪರಿಚಯಸ್ತನಾದ ಕಾಂಗ್ರೆಸ್ (ಐ) ಪುಡಾರಿ ತನ್ನ ಪ್ರಭಾವ ಕಡಿಮೆಯಾದಾಗ ಅಥವಾ ಆತ ಕೆಲಸ ಮಾಡದೇ ಇರುವ ಬಗ್ಗೆ ಜನ ತಿರುಗಿ ಬಿದ್ದಾಗ ಸಾಲ ಮೇಳ ನಡೆಸುವ ಅವಶ್ಯಕತೆಯನ್ನು ಮನಗಾಣುತ್ತಾನೆ ಯಾಕೆಂದರೆ ಆತ ಈ ರೀತಿಯಲ್ಲಿ ಮಾತ್ರ ಕೆಲಸ ಮಾಡಬಲ್ಲ. ಇದು ತೀರ ಸುಲಭದ ಕೆಲಸವೂ ಹೌದು. ಯಾಕೆಂದರೆ ಕೆಲಸ ಮಾಡಿಸಿ ಈ ಪುಡಾರಿ ಹೆಸರು ಪಡೆಯಬಹುದು. ಆತ ತಾನೇ ಸ್ವತಃ ಅಥವಾಪೂಜಾರಿಗೆ ಹತ್ತಿರದವರಾದ ಇನ್ಯಾರನ್ನೊ ಕರೆದುಕೊಂಡು ಪೂಜಾರಿಯವರಲ್ಲಿಗೆ ಹೋಗುತ್ತಾನೆ. ಸಾಲ ಮೇಳ ನಡೆಸುವಂತೆ ಕೇಳಿಕೊಳ್ಳುತ್ತಾನೆ. ಪೂಜಾರಿಯವರು ಹೂಂಗುಟ್ಟುತ್ತಾರೆ.

ನಂತರ ಪೂಜಾರಿಯವರು ರಾಜ್ಯಕ್ಕೆ ಭೇಟಿ ನೀಡಿದಾಗ ಬ್ಯಾಂಕುಗಳ ಹುಂಡಿ ಜನರಲ್ ಮ್ಯಾನೇಜರ್‌ರಂತಹ ಉನ್ನತ ಅಧಿಕಾರಿಗಳನ್ನು ಕರೆದು ಆಜ್ಞೆ ನೀಡುತ್ತಾರೆ. ಇಂತಹ ದಿನಗಳಲ್ಲಿ, ಇಂತಹ ಸ್ಥಳಗಳಲ್ಲಿ ಇಂತಿಷ್ಟು ಸಾಲಗಳ ವಿತರಣೆಯಾಗಲೇ ಬೇಕು. ಬ್ಯಾಂಕಿನ ಅಧಿಕಾರಿಗಳು ಮರು ಮಾತಿಲ್ಲದೇ ಒಪ್ಪಿಕೊಳ್ಳುತ್ತಾರೆ. ಯಾಕೆಂದರೆ ಅವರಿಗೆ ಮುಂಬಡ್ತಿ, ಅಧಿಕಾರವಧಿ ವಿಸ್ತರಣೆ ಇವೆಲ್ಲ ಪೂಜಾರಿಯವರ ಕೃಪೆಯಿಂದಲೇ.

ಅನಂತರ ಸಾಲ ಮೇಳ ಕಾರ್ಯಕ್ರಮ ನಡೆಸುವ ಬಗ್ಗೆ ಬ್ಯಾಂಕಿನ ಅಧಿಕಾರಿಗಳು ಸಭೆ ನಡೆಸುತ್ತಾರೆ. ಸಭೆಯಲ್ಲಿ ಯಾವ (ಕಾಂಗ್ರೆಸ್–ಐ) ಸಮಾಜ ಕಾರ್ಯಕರ್ತ ಅರ್ಜಿಗಳನ್ನು ಅಂಚುತ್ತಾನೆ ಇತ್ಯಾದಿಗಳ ಬಗ್ಗೆ ಸೂಚನೆ ನೀಡಲಾಗುತ್ತದೆ. ಅಂತಹ ಕಾರ್ಯಕರ್ತರುಗಳು ಕಳುಹಿಸಿದ ಯಾವುದೇ ಅರ್ಜಿಗಳನ್ನು ತಿರಸ್ಕರಿಸುವಂತಿಲ್ಲ.

ಸಭೆಯ ನಂತರ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಸಾಲ ಮೇಳ ಕಾರ್ಯಕ್ರಮದ ಬಗ್ಗೆ ಪ್ರಕಟಣೆ ಹೊರಡಿಸುತ್ತದೆ. ತಕ್ಷಣವೇ ಕಾಂಗ್ರೆಸ್ ಐ ಕಾರ್ಯಕರ್ತರು ಚುರುಕಾಗುತ್ತಾರೆ. ಅರ್ಜಿ ನಮೂನೆಗಳನ್ನು ಮುದ್ರಿಸಲಾಗುತ್ತದೆ. ಅರ್ಜಿದಾರರ ಫೋಟೊ ತೆಗೆದುಕೊಡಲು ಕಾಂಗ್ರೈ ಪುಡಾರಿಗಳ ಪರವಾದ ಛಾಯಾ ಗ್ರಾಹಕನೊಬ್ಬ ತಯಾರಾಗುತ್ತಾನೆ.ಈ ನಮೂನೆಗಳಿಗೆ ಮತ್ತು ಫೋಟೋಗಳಿಗೆ ನಿಗದಿತ ಶುಲ್ಕ ವಸೂಲು ಮಾಡಲಾಗುತ್ತದೆ. [ಈ ಶುಲ್ಕ ಕೆಲವು ಸಾರಿ ಇನ್ನೂರು ರೂಗಳವರೆಗೂ ಏರಿದ್ದಿದೆ.] ಇವೆಲ್ಲ ಅನಧಿಕೃತ ಕಾರ್ಯಗಳು. ಅರ್ಜಿ ನಮೂನೆಗಳ ಭರ್ತಿಯಾದ ಮೇಲೆ ದೊಡ್ಡ ಪುಡಾರಿ ಅವುಗಳನ್ನು ತನ್ನ ಶಿಫಾರಸ್ಸು ಸೂಚನೆಗಳೊಂದಿಗೆ ಮಾರ್ಗದರ್ಶಿ ಬ್ಯಾಂಕಿಗೆ ನೀಡುತ್ತಾನೆ. ಅಲ್ಲಿಂದ ಅರ್ಜಿಗಳು ಭಾಗವಹಿಸುವ ಬ್ಯಾಂಕುಗಳ ಶಾಖೆಗಳಿಗೆ ರವಾನಿಸಲ್ಪಡುತ್ತವೆ.

> **ಎಲ್ಲೆಲ್ಲೂ ಪೂಜಾರಿಯವರ ಸಾಲ ಮೇಳದ ಬಗ್ಗೆ ಕೇಳುತ್ತಿರುತ್ತೇವೆ, ನೋಡುತ್ತಿರುತ್ತೇವೆ ಈ ಸಾಲ ಮೇಳ ಹೇಗೆ ನಡೆಯುತ್ತದೆ ಸಾಲ ಮೇಳಗಳಲ್ಲಿ ಭಾಗ ವಹಿಸಿದವರೊಬ್ಬರಹೃದಯಂಗಮ ಅನುಭವ.**

ಬ್ಯಾಂಕ್ ಶಾಖೆಗಳಿಗೆ ಈ ಅರ್ಜಿಗಳು ತಲುಪುವ ವೇಳೆಗಾಗಲೇ ಸ್ಥಳೀಯ ಪುಡಾರಿಗಳು ತಮ್ಮ ಅನುಚರರೊಂದಿಗೆ ಒಂದು ಬ್ಯಾಂಕ್ ಅಧಿಕಾರಿಗಳ ಮೇಲೆ ಒತ್ತಡ ಹೇರಲು ಪ್ರಾರಂಭ ಮಾಡುತ್ತಾರೆ. ಅವರ ಜೊತೆಯಲ್ಲಿ ಪೂಜಾರಿಯ ಗುಮ್ಮವಿರುತ್ತದೆ. ಬ್ಯಾಂಕಿನ ಅಧಿಕಾರಿಗಳು ಒತ್ತಡಕ್ಕೆ ಮಣಿಯದಿದ್ದರೆ ಈ ಗುಮ್ಮ ಕೆಲಸ ಮಾಡಲು ಪ್ರಾರಂಭ ಮಾಡುತ್ತದೆ. ಆಗ ಬ್ಯಾಂಕ್ ಅಧಿಕಾರಿಗಳು ಮಣಿಯಲೇ ಬೇಕು. ಬ್ಯಾಂಕಿನ ಕೇಂದ್ರ ಕಛೇರಿಗಳಿಂದಲೂ ದೂರವಾಣಿ ಬರುತ್ತದೆ. ಆಗ ಬೇಕಾದ ಕೆಲಸ ನಿಯಮಕ್ಕೆ ವಿರುದ್ಧವಾಗಿದ್ದರೆ"ಉಪಾಯವಾಗಿ ಮಾತನಾಡಿ ಕಳುಹಿಸಿಬಿಡಿ" ಎಂಬ ಸೂಚನೆ ಬರುತ್ತದೆ. ಯಾವ ರೀತಿ ? ಅದು ಅಧಿಕಾರಿಯ ಸಾಮರ್ಥ್ಯಕ್ಕೆ ಬಿಟ್ಟದ್ದು. ನಿಯಮಕ್ಕೆ ವಿರುದ್ಧವಲ್ಲದಿದ್ದರೆ ವ್ಯಕ್ತಿಯ ಅರ್ಹತೆ ಅಡ್ಡಿಯಾಗಿದ್ದರೆ ವಿಚಾರಮಾಡಬೇಡಿ ಮಂಜೂರು ಮಾಡಿ ಇದುದೂರವಾಣಿಯಲ್ಲಿ ಮಾತ್ರ ಬರವಣಿಗೆಯಲ್ಲಿ ಬೇಕಾದರೆ 'ವ್ಯಕ್ತಿಯ ಅರ್ಹತೆ ಮತ್ತು ಸಾಲ ಕೇಳಿದ ಚಟುವಟಿಕೆಯ ಸೂಕ್ತತೆಯನ್ನು ಅರಿತು ನಿರ್ಧಾರ ಕೈಗೊಳುವುದು ಎಂಬ ಸೂಚನೆ. ಕೆಲವು ಶಾಖಾ ಮಟ್ಟದ ಅಧಿಕಾರಿಗಳಿಗೆ ಅತ್ತನರಿ ಇತ್ತಪುಲಿ ಎಂಬ ಪರಿಸ್ಥಿತಿ ಆದರೆ ಗಾಳಿ ಬಂದಾಗ ತೂರಿಕೊ ಎಂಬ ಮಾತಿನಂತೆ ಇದೇ ಸಮಯದಲ್ಲಿ ಉದಾರವಾಗಿ ಸಾಲ ನೀಡಿ ಲಂಚ ಸ್ವೀಕರಿಸುವ ಭ್ರಷ್ಟ ಅಧಿಕಾರಿಗಳೂ ಸಾಕಷ್ಟಿದ್ದಾರೆ. ಈಗ ಹೇಗಿದ್ದರೂ ಸಾಲ ಮೇಳದ ಸಾಲಗಳ ವಸೂಲಿ ಜವಾಬ್ದಾರಿ ಇರುವುದಿಲ್ಲ. ವಸೂಲಿಯಾಗದೇ ಇದ್ದರೆ ಸಾಲಮೇಳದಲ್ಲಿ ಒತ್ತಡವಿದ್ದರಿಂದ ಕೊಟ್ಟದ್ದು ಎಂಬ ಉತ್ತರ ತಯಾರಿರುತ್ತದೆ.

(ಬಾಕ್ಸ್ ನೋಡಿ)

ಸಾಲಮೇಳದ ವ್ಯವಸ್ಥೆ ಅದ್ದೂರಿಯಾಗಿರಬೇಕು. ವ್ಯವಸ್ಥೆಯಲ್ಲಿ ಸ್ವಲ್ಪ ಲೋಪದೋಷಗಳಿದ್ದರು ಬ್ಯಾಂಕ್ ಅಧಿಕಾರಿಗಳಿಗೆ ಬಂತು ಗ್ರಹಚಾರ ಪೂಜಾರಿಯವರು ತಮ್ಮ ಭಾಷಣದಲ್ಲೇ ಪ್ರಾರಂಭಿಸುತ್ತಾರೆ. "ನೋಡಿ ಈ ಬ್ಯಾಂಕು ಅಧಿಕಾರಿಗಳನ್ನ ನಾಲ್ಕು ಸಾವಿರ ಸಂಬಳ ಪಡೆಯುತ್ತಾರೆ. ನನಗೆ ವೇದಿಕೆ ನಿರ್ಮಿಸಿದ್ದಾರೆ. ಆದರೆ ನಿಮ್ಮಗಳನ್ನ ಬಿಸಿಲಿನ್ನಲ್ಲಿ ನಿಲ್ಲಿಸಿದ್ದಾರೆ. ಕುಳಿತುಕೊಳ್ಳಲು ಒಂದು ಜಮುಕಾನವನ್ನೂ ಹಾಸಿಲ್ಲ. ನಮ್ಮ ಬಡ ಜನತೆಯ ಬಗ್ಗೆ ಇವರಿಗಿರುವ ನಿಷ್ಕಾಳಜಿಯನ್ನು ನೋಡಿ" ಇಂತಹ ಒಂದೆರಡುಸಂದರ್ಭಗಳಲ್ಲಿ ಪೂಜಾರಿಯವರೂ ತಾವೂ ಜನರೊಂದಿಗೆ ಬಿಸಿಲಿನಲ್ಲೇ ನಿಂತರು. ಸಾಲಮೇಳದ ನಂತರ ಎಲ್ಲಾ ಬ್ಯಾಂಕಿನ ಉನ್ನತ ಅಧಿಕಾರಿಗಳಿಗೆ ಸಹಸ್ರನಾಮಾರ್ಚನೆ ಏಕಾವಚನದ ಬೈಗುಳ.

ಬ್ಯಾಂಕುಗಳೊಳಗೆ

ಸಾಕಷ್ಟು ಸಾಲಮೇಳಗಳನ್ನು ನಡೆಸಿರುವ ಬ್ಯಾಂಕ್ ಅಧಿಕಾರಿಗಳು ಈಗ ಪೂಜಾರಿಯವರ ಪಟ್ಟುಕೆಳಗೆ ಸರಿಯಾದ ತಿರುಮಂತ್ರ ಹೇಳಲು ಕಲಿತಿದ್ದಾರೆ. ಭ್ರಷ್ಟ ಅಧಿಕಾರಿಗಳಂತೂ ಸರಿಯೋ ಸರಿ ಮನಬಂದಷ್ಟು ಸಾಲಗಳನ್ನು ಕೊಟ್ಟು ಹಣದಾಹ ತಿರಿಸಿಕೊಳ್ಳುತ್ತಾರೆ. ತಮ್ಮ ಜೊತೆಗೆ ಇತರರಿಗೂ ತಿನ್ನಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ಮದ್ಯದಂಗಡಿಗಳಿಗೆ ಮಾಂಸದಂಗಡಿಗಳಿಗೆ ಒಳ್ಳೆಯ ವ್ಯಾಪಾರ ಸಾಲಗಾರರು ಮಹಿಳೆಯರಾಗಿದ್ದರೆ ಲೈಂಗಿಕ ತೀಟೆ ತೀರಿಸಿಕೊಳ್ಳುವವರೂ ಸಾಕಷ್ಟು ಜನ ಇದು ಒಂದು ಮುಖ.

ಒಬ್ಬ ಅಧಿಕಾರಿ ತನ್ನ ಕೆಲಸವನ್ನು ಮುತುವರ್ಜಿಯಿಂದ ಮಾಡಬೇಕೆಂದರೆ ಒಂದು ದಿನದಲ್ಲಿ ಹೆಚ್ಚೆಂದರೆ ಐದು ಸಾಲಗಳನ್ನು ಕೊಡಬಹುದು. ಆದರೆ ಸಾಲಮೇಳಗಳಲ್ಲಿ ಸಾವಿರಾರು ಜನರಿಗೆ ಕೋಟಿಗಟ್ಟಲೇ ರೂಪಾಯಿಗಳ ಸಾಲ ನೀಡುತ್ತಾರಲ್ಲವೇ ? ಇದು ಹೇಗೆ ಎಂಬುದು ಪ್ರಶ್ನೆ. ಸಾಲಮೇಳಗಳು ಇಲ್ಲದಿರುವ ಶಾಖೆಗಳಿಂದ ಸಾಲಮೇಳಗಳಿರುವ ಕಡೆಗೆ ನೌಕರರನ್ನು ಕ್ರೂಢಿಕರಿಸುವುದು ಸಾಲ ನೀಡಿಕೆಯ ಸಾಮರ್ಥ್ಯ ಸ್ವಲ್ಪ ಮಟ್ಟಿಗೆ ಹೆಚ್ಚಿಸುತ್ತದೆ. ಆದರೆ ಬ್ಯಾಂಕ್ ಅಧಿಕಾರಿಯ ಜಾಣಾಕ್ಷತನ ನೆರವಿಗೆ ಬರುತ್ತದೆ. ಆತ ಹೂಡುವ ಕೆಲವು ತಂತ್ರಗಳಿವು.

1. ಸಾಲ ಮೇಳದ ಮೊದಲ ಕೆಲವು ತಿಂಗಳುಗಳಿಂದ ನೀಡಿದ ಸಾಲಗಳನ್ನೂ ಸಾಲಮೇಳದ ಲೆಕ್ಕಕ್ಕೆ ಸೇರಿಸುತ್ತಾನೆ.
2. ಮುಂದೆ ನೀಡಬಹುದಾದ ಸಾಲಗಳಿಗೆ ನಾಮಕಾವಸ್ಥೆ ಮಂಜೂರಾತಿ ಪತ್ರ ನೀಡುತ್ತಾನೆ.ಅದರಲ್ಲಿ ಬ್ಯಾಂಕು ನಿಯಮಗಳಿಗೆ ಅನುಸಾರವಾಗಿ ಎಲ್ಲವೂ ಸರಿಯಾಗಿದ್ದರೆ ಮಾತ್ರ ಮುಂದೆ ಸಾಲ ವಿತರಿಸಲಾಗುವುದು ಎಂಬ ಷರತ್ತಿರುತ್ತದೆ.
3. ಸಾಲ ಕೊಡಿಸಲು ಮುಂದಾಗಿ ಓಡಾಡುವ ಪುಡಾರಿಗಳನ್ನು ತೃಪ್ತಿಪಡಿಸುವುದು ಇದರಿಂದ ಜನರಒತ್ತಡವೂ ಇಲ್ಲ ಪುಡಾರಿಗಳ ಕಾಟವೂ ಇಲ್ಲ. ಜೊತೆಯಲ್ಲಿ ಮೇಲಿನ ಅಧಿಕಾರಿಗಳಿಗೆ ಪೂಜಾರಿಯವರ ಶಹಬ್ಬಾಸ್‌ಗಿರಿ.

ಈ ತಂತ್ರಗಳನ್ನು ಹೂಡಿದ ಅಧಿಕಾರಿ ಪೂಜಾರಿಯಿಂದ ಅರ್ಜಿದಾರರಿಂದ ಪುಡಾರಿಗಳಿಂದ ಬಯ್ಗುಳಕೇಳುತ್ತಾನೆ. ತೊಂದರೆ ಅನುಭವಿಸುತ್ತಾನೆ.

ಇಷ್ಟೊಂದು ಮಾನಸಿಕ ಒತ್ತಡ ತೊಂದರೆಗಳನ್ನು ಅನುಭವಿಸುವ ಬ್ಯಾಂಕ್ ಅಧಿಕಾರಿಗಳು ಪ್ರತಿಭಟಿಸುವುದಿಲ್ಲ ಯಾಕೆ ? ಕಾರಣ ಇಷ್ಟೇ ಕಷ್ಟ ಅನುಭವಿಸುವವರು ಶಾಖಾ ಮಟ್ಟದ ಕಿರಿಯ ಅಧಿಕಾರಿಗಳು ಉನ್ನತ ಅಧಿ

[6ನೇ ಪುಟ ನೋಡಿ]

ಸಾಲ ಮರುಪಾವತಿ

ಪೂಜಾರಿ ಸಾಲ ಎಂದರೆ ವಾಪಸ್ಸು ಮಾಡುವ ಅವಶ್ಯಕತೆ ಇಲ್ಲ ಎಂಬ ಭಾವನೆ ಜನರಲ್ಲಿ ಮೂಡಿಸಲಾಗಿದೆ. ಆದ್ದರಿಂದ ಸಾಲ ವಸೂಲಾತಿ ಅತಿ ಕಡಿಮೆ ಠೇವಣಿ ವಿಮೆ ಮತ್ತು ಸಾಲ ಜಾಮೀನು ನಿಗಮವೆಂಬುದೊಂದಿದೆ. ಆದ್ಯತೆಯ ವಲಯಕ್ಕೆ ನೀಡಿದ ಸಾಲಗಳಿಗೆ ಈ ನಿಗಮ ಜಾಮೀನು ನೀಡುತ್ತವೆ. ವಸೂಲಾಗದ ಸಾಲಗಳ ಮೇಲೆ ಶೇಕಡಾ 60 ರವರೆಗೆ ಈ ನಿಗಮ ನೀಡುತ್ತದೆ. ಬ್ಯಾಂಕುಗಳಿಗೆ ಅದೇ ಗಟ್ಟಿ.

ಪಶ್ಚಿಮ ಬಂಗಾಳದಲ್ಲಿ

ಎಡರಂಗ ಸರ್ಕಾರ ಆಡಳಿತದಲ್ಲಿರುವ ಪಶ್ಚಿಮ ಬಂಗಾಳದಲ್ಲಿ ಈ ಕಾರ್ಯಕ್ರಮ ಹೇಗೆ ಕಾರ್ಯರೂಪಕ್ಕೆ ಬರುತ್ತಿದೆ ಎಂಬುದು ಕುತೂಹಲಕರ ಸಂಗತಿ. ಅಧಿಕಾರ ವಿಕೇಂದ್ರಿಕರಣ ಆಗಿರುವುದರಿಂದ, ಪಂಚಾಯತಿಗಳು ಕ್ರಿಯಾಶೀಲವಾಗಿರುವುದರಿಂದ ಜನರ ಸಕ್ರೀಯ ಪಾತ್ರವಿದೆ. ಜನರ ಸಕ್ರಿಯ ಪಾತ್ರವಿರುವುದರಿಂದ ಜನರ ಅವಶ್ಯಕತೆ, ಇರುವ ಸಂಪನ್ಮೂಲಗಳ ವೈಜ್ಞಾನಿಕ ಅಭಿವೃದ್ಧಿ ಇವು ಸಾಧ್ಯವಾಗಿವೆ. ಕೇಂದ್ರ ಸರ್ಕಾರವೇ ಇದನ್ನು ಮೆಚ್ಚಿಕೊಳ್ಳುವಂತಾಗಿವೆ. ಪ. ಬಂಗಾಳದಲ್ಲಿ ಕಾರ್ಯಕ್ರಮ ಯಶಸ್ವಿಯಾಗಲು ಇನ್ನೊಂದು ಮುಖ್ಯ ಕಾರಣವಿದೆ. ಅದು ಅಲ್ಲಿ ಭೂಸುಧಾರಣಾ ಕಾರ್ಯಕ್ರಮಗಳು ಚೆನ್ನಾಗಿ ಜಾರಿಯಲ್ಲಿ ಬಂದಿರುವುದು. ಇದರಿಂದ ಶೋಷಕರ ಬಲಪೂರ್ತಿಯಾಗಿ ಕುಗ್ಗಿಹೋಗಿದೆ. ಇದರ ಜೊತೆಯಲ್ಲಿ ಜನ ಸಂಘಟಿತರಾಗಿದ್ದಾರೆ.

ಗ್ರಾಮೀಣ ಸಾಲದ ಶೂಲ

ಈ ಎಲ್ಲಾ ಸಾಲ ನೀಡಿಕೆಯ ನಾಟಕಗಳ ನಡುವೆ ಗ್ರಾಮೀಣ ಜನರನ್ನು ಸಾಲದ ಶೂಲ ಬೆನ್ನಿನಲ್ಲಿ ಇರಿಯುತ್ತಿದೆ. ಇದಕ್ಕೆ ಕಾರಣವೇನು? ಒಂದು ವಿಶ್ಲೇಷಣೆ

ಬಿಪ್ಲಾವ ದಾಸ್‌ಗುಪ್ತಾ
ಅನುವಾದ : ಕೆ. ವಿ.

ಕಿಸಾನ್ ಸಭಾದ ಸೆಪ್ಟೆಂಬರ್ ಚಳುವಳಿಯ ಒಂದು ಪ್ರಮುಖ ಬೇಡಿಕೆ ಕೃಷಿ ಬಿಕ್ಕಟ್ಟಿನ ಹೊರೆಯನ್ನು ರೈತಾಪಿ ವರ್ಗದ ದುರ್ಬಲ ಹೆಗಲ ಮೇಲೆ ವರ್ಗಾಯಿಸುವ ಆಳುವ ವರ್ಗಗಳ ಪ್ರಯತ್ನಗಳಿಗೆ ಸಂಬಂಧಪಟ್ಟದೆ. ಇವುಗಳಲ್ಲಿ ಕೆಲವು ವಿಶೇಷವಾಗಿ ರೈತರಿಗೆ ಮಾತ್ರ ಅನ್ವಯಿಸುವಂತಹದಿದ್ದರೆ (ಉದಾ: ನೀರಾವರಿ ತೆರಿಗೆ), ಇನ್ನೂ ಕೆಲವು (ಉದಾ: ಕೊರತೆ ಹಣಕಾಸು) ಸಮಸ್ತ ಜನ ಸಮೂಹಗಳನ್ನೂ ತಟ್ಟುವುದರಿಂದ, ಅದರಲ್ಲಿ 70% ಇರುವ ರೈತರನ್ನು ಕೂಡ ತೀವ್ರವಾಗಿ ಭಾದಿಸುವ ಪ್ರಶ್ನೆಗಳು.

ಮೊದಲನೆಯದಾಗಿ, ಹೆಚ್ಚುತ್ತಿರುವ ಪರೋಕ್ಷ ತೆರಿಗೆಗಳ ಭಾರ. ಆದಾಯ ತೆರಿಗೆ, ಕಂಪನಿ ತೆರಿಗೆ ಮೊದಲಾದವು ಪ್ರತ್ಯಕ್ಷ ತೆರಿಗೆಗಳು. ಇವುಗಳ ದರ ಆದಾಯಕ್ಕನುಗುಣವಾಗಿ ಹೆಚ್ಚುತ್ತವೆ. ಮಾರಾಟ ತೆರಿಗೆ, ಅಬಕಾರಿ ಸುಂಕ ಮುಂತಾದವು ಪರೋಕ್ಷ ತೆರಿಗೆಗಳು ಆದಾಯವಿರಲಿ, ಇಲ್ಲದಿರಲಿ ಎಲ್ಲರೂ ಸಮಾನ ರೀತಿಯಲ್ಲಿ ತೆರಬೇಕಾದ ತೆರಿಗೆಗಳಿವು. ಕೇಂದ್ರ ಸರ್ಕಾರ ಶ್ರೀಮಂತರನ್ನು ತಟ್ಟುವ ಪ್ರತ್ಯಕ್ಷ ತೆರಿಗೆಗಳನ್ನು ಹೆಚ್ಚಿಸುವ ಬದಲು, ಬಡವರನ್ನೇ ಹೆಚ್ಚು ಬಾಧಿಸುವ ಪರೋಕ್ಷ ತೆರಿಗೆಗಳನ್ನೇ ಹೆಚ್ಚಿಸುವ ಹವ್ಯಾಸ ಬೆಳೆಸಿಕೊಂಡಂತೆ ಕಾಣುತ್ತಿದೆ. ಕಳೆದ ವರ್ಷ ವಿಧಿಸಿದ ಹೆಚ್ಚಿನ ತೆರಿಗೆಗಳಲ್ಲಿ 96% ಪರೋಕ್ಷ ತೆರಿಗೆಗಳಿಂದ ಬಂದಿದ್ದರೆ, ಈ ಬಾರಿಯ ಬಜೆಟ್‌ನ ಹೊಸ ತೆರಿಗೆಗಳಲ್ಲಿ 84% ಪರೋಕ್ಷ ತೆರಿಗೆಗಳಿಂದಲೇ ಅಂದರೆ ಬಡ ಜನರಿಂದಲೇ ಕಿತ್ತುಕೊಳ್ಳಲು ಯೋಚಿಸಲಾಗುತ್ತಿದೆ. ಇದೂ ಸಾಲದೆಂಬಂತೆ ಸರ್ಕಾರ ತನ್ನ ದೀರ್ಘಾವಧಿ ಆರ್ಥಿಕ ಧೋರಣೆಯಲ್ಲಿ ಇನ್ನೈದು ವರ್ಷಗಳ ಕಾಲ ಶ್ರೀಮಂತರ ಮೇಲಿನ ತೆರಿಗೆ ಏರಿಸುವುದಿಲ್ಲವೆಂದು ಅವರಿಗೆ ಭರವಸೆ ನೀಡಿದೆ! ಬೇರೆ ಯಾವುದೇ ಸಂಸದೀಯ ಪ್ರಜಾಪ್ರಭುತ್ವ ಈ ರೀತಿಯ ಆಶ್ವಾಸನೆಯನ್ನು ಶ್ರೀಮಂತರಿಗೆ ನೀಡಿದ ಉದಾಹರಣೆಗಳಿಲ್ಲ. ಯೋಜನಾ ದಸ್ತಾವೇಜು ಕೂಡಾ ಇದುವರೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಗ್ರಾಮೀಣ ಆದಾಯಗಳನ್ನು ಶೇಖರಿಸಬೇಕೆಂದು ಹೇಳಿದ್ದರೂ, ಗ್ರಾಮೀಣ ಶ್ರೀಮಂತರ ಮೇಲೆ ಕೃಷಿ ಆದಾಯ ತೆರಿಗೆಯ ಬಗ್ಗೆ ಚಕಾರವೆತ್ತಿಲ್ಲ.

ತೆರಿಗೆಗಳಿಗಿಂತಲೂ ಹೆಚ್ಚಾಗಿ ಗ್ರಾಮೀಣ ಬಡವರನ್ನು ತಟ್ಟಿರುವ ಇನ್ನೊಂದು ಸಂಗತಿಯೆಂದರೆ ಸರ್ಕಾರವೇ ಆಗಾಗ ಸಾರ್ವಜನಿಕ ಉದ್ದಿಮೆಗಳ ಸೇವಾ ಸೌಲಭ್ಯ ಹಾಗೂ ಸರಕುಗಳ ಬೆಲೆಗಳನ್ನು ಏರಿಸುತ್ತಾ ಬರುತ್ತಿರುವುದು. ಪೆಟ್ರೋಲ್, ಸೀಮೆಎಣ್ಣೆಗಳ ಬೆಲೆಗಳನ್ನು ಹಲವು ಬಾರಿ ಏರಿಸಲಾಯಿತು. ಕೃಷಿ ಸಲಕರಣೆಗಳ ಬೆಲೆಗಳನ್ನೂ ಹೆಚ್ಚಿಸಲಾಯಿತು. ಈ ರೀತಿಯ ಬೆಲೆ ಏರಿಕೆ ಸಂಸತ್ತಿನ ಹತೋಟಿಗೊಳಪಡುವುದಿಲ್ಲವಾದ್ದರಿಂದ ಕೇಂದ್ರ ಸರ್ಕಾರ ಸಂಪನ್ಮೂಲ ಶೇಖರಣೆಗೆ ಹೆಚ್ಚೆಚ್ಚಾಗಿ ಇದೇ ವಿಧಾನವನ್ನೇ ಅನುಸರಿಸುತ್ತಿದೆ. ಸಾರ್ವಜನಿಕ ಉದ್ದಿಮೆಗಳ ಆರ್ಥಿಕ ಸಾಮರ್ಥ್ಯ ಹೆಚ್ಚಿಸಲು ಈ ಕ್ರಮ ಎಂದು ಸಬೂಬು ಹೇಳಲಾಗುತ್ತದೆ. ಅಂದರೆ ಇವು ಹೆಚ್ಚಾಗಿ ಜೀವನಾವಶ್ಯಕ ಸರಕುಗಳಾದ್ದರಿಂದ ಪರೋಕ್ಷ ತೆರಿಗೆಗಳಂತೆ ಬಡ ಜನರ ಜೀವನ ಮಟ್ಟವನ್ನು ಇನ್ನಷ್ಟು ಕೆಳಕ್ಕೆ ತಳ್ಳುತ್ತಿವೆ

ಮೂರನೆಯದಾಗಿ, ಗೊಬ್ಬರದ ಮೇಲಿನ ಸಹಾಯ ಧನವನ್ನೂ ರದ್ದುಪಡಿಸುವ ತೀವ್ರ ಪ್ರಯತ್ನಗಳು ನಡೆಯುತ್ತಿವೆ. ರೈತರು ಇಂತಹ ಪರಿಸ್ಥಿತಿಗೆ ಒಗ್ಗಿಕೊಳ್ಳಲು ಸಿದ್ಧರಾಗಬೇಕು ಹಾಗೂ ಅದೇ ವೇಳೆ ತಮ್ಮ ಉತ್ಪನ್ನಗಳ ಬೆಲೆ ಹೆಚ್ಚಿಸಬಾರದು ಎಂದು ಕೇಂದ್ರ ಕೃಷಿ ಇಲಾಖೆ ರೈತರಿಗೆ ಸಲಹೆ ನೀಡುತ್ತಿದೆ! ಅಂದರೆ ಬಡ ರೈತರು ತಮ್ಮ ಜೀವನ ಮಟ್ಟವನ್ನು ಇನ್ನಷ್ಟು ಪಾತಾಳಕ್ಕೆ ತಳ್ಳಲು ಸಿದ್ಧರಾಗಬೇಕು! ಯಾಕೆಂದರೆ ಸರ್ಕಾರದ ಖರ್ಚನ್ನು ಹೆಚ್ಚಿಸಿರುವ ಸಹಾಯ ಧನ ರೈತರ ಅದಕ್ಷತೆಯನ್ನೂ ಹೆಚ್ಚಿಸುತ್ತಿದೆಯಂತೆ!

ನಾಲ್ಕನೆಯದಾಗಿ, ಕೊರತೆ ಹಣಕಾಸಿನ ಮೂಲಕ ತನ್ನ ಖರ್ಚನ್ನು ಸರಿದೂಗಿಸಿಕೊಳ್ಳಲು ಕೇಂದ್ರ ಸರ್ಕಾರ ನೋಟುಗಳನ್ನು ಮುದ್ರಿಸಿ ಉಂಟು ಮಾಡುತ್ತಿರುವ ಹಣದುಬ್ಬರ ಸಮಸ್ತ ಜನ ಸಮೂಹಗಳ ಜೀವನವನ್ನು ಅತ್ಯಂತ ದುರ್ಭಲಗೊಳಿಸಿರುವುದಂತೂ ಎಲ್ಲರಿಗೂ ತಿಳಿದ ಸಂಗತಿ. ತಮ್ಮ ಉತ್ಪನ್ನಗಳಿಗೆ ಸರಿಯಾದ ಬೆಲೆ ಪಡೆಯುವ ಸ್ಥಿತಿಯಲ್ಲಿಲ್ಲದ ಬಡ ರೈತರ ದುಸ್ಥಿತಿಯಂತೂ ಇದರಿಂದ ಇನ್ನಷ್ಟು ಉಲ್ಬಣಗೊಳ್ಳುತ್ತಿದೆ. ಏಳನೇ ಯೋಜನೆಯಲ್ಲಿ ಒಟ್ಟು ಹಣ ಕಾಸು ಕೊರತೆ 14ಸಾವಿರ ಕೋಟಿ ದಾಟಬಾರದೆಂದು ಅಂದಾಜು ಮಾಡಲಾಗಿತ್ತು. ಆದರೆ ಯೋಜನೆಯ ಮೊದಲೆರಡು ವರ್ಷಗಳಲ್ಲೇ ಈ ಮಿತಿ ದಾಟಲಾಗಿವೆ!

ಕೊನೆಯದಾಗಿ, 1984ರ ರಿಝರ್ವ್‌ಬ್ಯಾಂಕ್ ವರದಿ ಗ್ರಾಮೀಣ ಬಡತನ ಎಷ್ಟು ಅಗಾಧವಾಗಿದೆ ಎಂಬುದಷ್ಟೆ, ಕೆಲವು ಅಂಕಿ-ಅಂಶ ನೀಡಿದೆ. ಗ್ರಾಮೀಣ ಸಾಲ 1983ರಲ್ಲಿ 1300 ಕೋಟಿಗಳು. 1952ರಲ್ಲಿ ಇದು ಕೇವಲ 800 ಕೋಟಿರೂಗಳಷ್ಟಿತ್ತು. ಅಂದರೆ 31 ವರ್ಷಗಳಲ್ಲಿ 16 ಪಟ್ಟು ಏರಿದೆ! ಇದರಿಂದಾಗಿ ಬ್ಯಾಂಕ್ ಮತ್ತಿತರ ಹಣಕಾಸು ಸಂಸ್ಥೆಗಳು ನೀಡುವ ಸಾಲಗಳಲ್ಲಿ 55-60 ಶೇಕಡಾವಷ್ಟೇ ಮರು ಪಾವತಿಮಾಡುತ್ತಿವೆ. 1981ರ ಕೃಷಿ ಗಣತಿ ಪ್ರಕಾರ ಎರಡೂವರೆ ಎಕ್ರೆಗಿಂತ ಕಡಿಮೆ ಜಮೀನಿರುವ ಬಡರೈತರ ಸಂಖ್ಯೆ 1970-71ರಲ್ಲಿ 51% ಇದ್ದುದು.1980. 81ರಲ್ಲಿ 56.5ಶೇಕಡಾಕ್ಕೇರಿದೆ. ಹೆಚ್ಚೆಚ್ಚು ಬಡ ರೈತರು ಭೂಹೀನರಾಗುತ್ತಿದ್ದಾರೆ. 1950-51ರಲ್ಲಿ ಭೂಹೀನ ಕೃಷಿ ಕಾರ್ಮಿಕರ ಸಂಖ್ಯೆ 3 ಕೋಟಿಯಿದ್ದುದು. 1981ರಲ್ಲಿ 5.26 ಕೋಟಿಗೇರಿದೆ. ಭೂಸುಧಾರಣೆ ಹಾಗೂ ಬಡತನ ಪರಿಹಾರ ಕ್ರಮಗಳೇನೇ ಇದ್ದರು. ಭೂಹಂಚಿಕೆಯಲ್ಲಿನ ಅಸಮಾನತೆ ಹೆಚ್ಚುತ್ತಾ ಹೋಗುತ್ತಿದೆ. 1981ರಲ್ಲೂ 25 ಎಕ್ರೆಗಿಂತ ಹೆಚ್ಚು ಜಮೀನು ಪಡೆದಿರುವ ಕೇವಲ 2.4 ಶೇಕಡಾ ಮಂದಿ ಒಟ್ಟು ಜಮೀನು ಕಾಲಂಶದಷ್ಟನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದಾರೆ.

ಕೇಂದ್ರ ಸರ್ಕಾರ ಗ್ರಾಮೀಣ ಜನ ಸಮೂಹಗಳ ಮೇಲೆ ಹೊರಿಸುತ್ತಾ ಅವರನ್ನು ದಟ್ಟದಾರಿದ್ರ್ಯಕ್ಕೆ ತಳ್ಳುರುವ ವಿವಿಧ ಹೊರೆಗಳ ಕೆಲವು ಉದಾಹರಣೆಗಳು ಇವು. ಅದೇ ಸಮಯದಲ್ಲಿ ಸರ್ಕಾರ ಗುತ್ತೇದಾರಿ ಬಂಡವಾಳಶಾಹಿ ಕುಟುಂಬಗಳಿಗೆ ಒಂದಾದ ಮೇಲೊಂದರಂತೆ ರಿಯಾಯ್ತಿಗಳನ್ನು ನೀಡುತ್ತಿದೆ.

ಯಾವುದೇ ಯೋಜನಾ ಪ್ರಕ್ರಿಯೆಯಲ್ಲಿ ಸಂಪನ್ಮೂಲಗಳ ಶೇಖರಣೆ ಅಗತ್ಯ. ಇದಕ್ಕೆ ಶ್ರೀಮಂತ ವಿಭಾಗಗಳಿಂದ (ಗ್ರಾಮೀಣ ಶ್ರೀಮಂತರನ್ನು ಸೇರಿಸಿ) ಅವರ ಸಾಮರ್ಥ್ಯಕ್ಕನುಗುಣವಾಗಿ ಕಾಣಿಕೆಗೆ ಒತ್ತಾಯಿಸದೆ, ಬದಲಿಗೆ ಅವರಿಗೆ ಹಲವಾರು 'ಪ್ರೋತ್ಸಾಹ'ಗಳನ್ನು ನೀಡುತ್ತಿರುವ ನಮ್ಮ ಭೂಜ್ವಾರ್ ಭೂಮಾಲಕ ಸರ್ಕಾರ ತೆರುವ ಸಾಮರ್ಥ್ಯವಿಲ್ಲದ ಬಡಜನ ಸಮೂಹಗಳ ಮೇಲೆ ಭಾರೀ ಹಣಕಾಸಿನ ಒತ್ತಡ ಹೇರಿ ಸಂಪನ್ಮೂಲ ಶೇಖರಿಸಲು ಪ್ರಯತ್ನಿಸುತ್ತಿದೆ. ಕೇಂದ್ರ ಸರ್ಕಾರದ ಈ ಪಕ್ಷಪಾತ ಪೂರ್ಣ ವರ್ಗಧೋರಣೆಗಳ ವಿರುದ್ಧ ಸೆಪ್ಟೆಂಬರ್ ಚಳುವಳಿಯ ಸಮಯದಲ್ಲಿ ಗ್ರಾಮೀಣ ಜನತೆಯ ನಡುವೆ ಪ್ರಚಾರ-ಪ್ರಕ್ಷೋಭೆ ನಡೆಸಬೇಕು. ●

ಐ. ಆರ್. ಡಿ. ಪಿ. ಸಾಲ
ಅಥವಾ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ

ಒಂದು ಊರು ಯಮ್ಮೂರು ಎಂದು ಹೆಸರು ರಂಗನರಸಿಂಹಯ್ಯಎಂಬುವರು ಪಟೇಲರು, ಊರ ಗಣ್ಯರು ನೂರಾರು ಎಕರೆ ಜಮೀನಿನ ಮಾಲಿಕ ಹಣವಂತರು,ಊರ ರೈತರಿಗೆ ಸಾಲನೀಡುವ ಲೇವಾದೇವಿ ವ್ಯವರಸ್ಥರಿಗೂ ಸಹ ಊರು ಹಿಂದುಳಿದಿತ್ತು. ಊರಿಗೆ ಯಾವುದೇ ತರಹದ ಸರ್ಕಾರಿ ಸಾಲ ಸೌಲಭ್ಯಗಳು ಸಿಕ್ಕಿರಲಿಲ್ಲ. ಊರಕೆಲವು ಬಡವರು ಪಟೇಲರ ಎದುರು ಈ ವಿಷಯವೆತ್ತಿದರು. ಪಟೇಲರಿಗೂ ಹೌದೆನಿಸಿತು. ಎಲ್ಲ ಊರುಗಳಿಗೆ ಸಿಗುವುದು ನಮಗ್ಯಾಕೆ ಬೇಡ. ಅಂತ ಪಟೇಲರ ಪ್ರಯತ್ನದಿಂದಾಗಿ ಊರು ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿ ಆರ್ಥಿಕ ನೆರವು ಪಡೆಯಲು ಆಯ್ಕೆಗೊಂಡಿತು. ಊರಸಂಪನ್ಮೂಲಗಳು ಜನರ ಕಸುಬು ಇತ್ಯಾದಿಗಳು ಬಗೆಗೆ ಮೊದಲೇ ಸಮೀಕ್ಷೆಯಾಗಿತ್ತು. ಯಾರಿಗೆ ಸಾಲ ನೀಡುವುದೆಂದು ನಿರ್ಧಾರವಾಗಬೇಕಲ್ಲವೆ?

ಅದಕ್ಕಾ ಗ್ರಾಮಸಭೆ ನಡೆಯಿತು. ಗ್ರಾಮಸಭೆಯ ವ್ಯವಸ್ಥೆಯನ್ನು ಊರ ಪಟೇಲರೇ ಖುದ್ದಾಗಿ ನಿಂತು ಮಾಡಿದರು. ಅಧಿಕಾರಿ ವೃಂದದವರೂ ಪಟೇಲರ ಆದರಾತಿಥ್ಯದತೃಪ್ತಿಹೊಂದಿದರು. ಇಪ್ಪತ್ತೈದು ಜನರನ್ನು ಆಯ್ಕೆ ಮಾಡಲಾಯಿತು. ಆಯ್ಕೆಗೂ ಸಹ ಪಟೇಲರೇ ಹೆಸರು ಸೂಚಿಸಿದರು. ಜನರಿಗಾಗಿ ಇಷ್ಟೊಂದು ಕಷ್ಟ ಪಡುವ ಪಟೇಲರೇ ಹೆಸರು ಸೂಚಿಸಿದರೆಅದನ್ನು ಪ್ರಶ್ನಿಸುವುದು ಸರಿಯೇ ಅಷ್ಟಕ್ಕೂ ಪಟೇಲರು ಕಡುಬಡವರ ಹೆಸರನ್ನೇ ಸೂಚಿಸಿದ್ದರು.

ಆಯ್ಕೆ ಮುಗಿದ ಮೇಲೆ ಅರ್ಜಿಗಳು ಬ್ಯಾಂಕುಗಳಿಗೆ ರವಾನೆಯಾದವು ಬ್ಯಾಂಕಿನ ಅಧಿಕಾರಿಗಳು ಬಂದರು. ತಪಾಸಣೆ ಮಾಡಿದರು. ಅವರಿಗೆ ಬೇಕಾಗುವ ಮಾಹಿತಿಗಳನ್ನು ಸರಿಯಾಗಿ ಬಡಜನ ಒದಗಿಸಲಾದೀತೆ? ಪಟೇಲರೇ ಒದಗಿಸಿದರು. ಎಲ್ಲರಿಗೂ ಒಂದೊಂದು ಎಮ್ಮೆಯನ್ನು ಕೊಡಿಸುವುದೆಂದೂ ಹಾಲನ್ನು ಅವರು ಹತ್ತಿರದ ತಾಲೂಕು ಕೇಂದ್ರದ ಹೋಟೆಲುಗಳಲ್ಲಿ ಮಾರಿ ಬಂದ ಹಣದಲ್ಲಿ ಸ್ವಲ್ಪ ಭಾಗವನ್ನು ಬ್ಯಾಂಕಿಗೆಕಟ್ಟಬೇಕೆಂದುಸಲಹೆ ಬಂತು.

ನಿಗದಿತ ದಿನ ಬ್ಯಾಂಕಿನವರು ಸಾಲ ವಿತರಿಸಲುತಯಾರಾದರು. ಎಮ್ಮೆಗಳನ್ನ ಎಲ್ಲಿಂದ ತರುವುದು ಪಟೇಲರು ಅದರ ವ್ಯವಸ್ಥೆ ಮಾಡಲು ಒಪ್ಪಿಕೊಂಡರು. ಪಟೇಲರ ಮನೆಯಲ್ಲೇ ಹತ್ತಾರು ಎಮ್ಮೆಗಳಿದ್ದವು. ಸಾಲ ವಿತರಣೆಯ ದಿನದಂದು ಪಟೇಲರೇ ಅವುಗಳನ್ನು ಹೊಡೆಸಿಕೊಂಡು ಬಂದು ಪಶುವೈದ್ಯರಿಂದ ಜಾನುವಾರುಗಳ ಆರೋಗ್ಯ ಮತ್ತು ಬೆಲೆಯ ಧೃಡೀಕರಣ ಪತ್ರಗಳನ್ನು ಪಡೆದು ಬ್ಯಾಂಕಿಗೆ ಹಾಜರುಪಡಿಸಿದರು. ಫಲಾನುಭವಿಗಳುಬ್ಯಾಂಕಿನವರು ಹೇಳಿದ ಕಡೆ ಸಹಿ ಮಾಡಿದರು. ಪಟೇಲರ ಪರವಾಗಿ ಬಂದ ಕೆಲವರು ಎಮ್ಮೆಯ ಮಾರಾಟಗಾರರಾಗಿ ಹಣ ಪಡೆದು ಪಟೇಲರಿಗೆ ತಲುಪಿಸಿದರು. ಫಲಾನುಭವಿಗಳಿಗೆ ಪಟೇಲರು ಹೇಳಿದರು ಎಲ್ಲರಿಗೂ ಶಂಠಿ ಎಮ್ಮೆಗಳನು ಕೊಡಬೇಕೆಂದು ಬ್ಯಾಂಕಿನವರು ಹೇಳಿದರೆ ಕೊಡಸೋ ಜವಾಬ್ದಾರಿನನಗಿರಲಿ. ಪಟೇಲರ ಜಮೀನಲ್ಲೇ ದುಡಿಯುವ ಬಡ ಫಲಾನುಭವಿಗಳು ಎದುರು ಹೇಳಲಾದೀತೆ. ಹಣ ಪಟೇಲರಲ್ಲೇ ಉಳಿಯಿತು. ಆಗಾಗ ಹೆಂಡಕ್ಕೆಂದು ಅಲ್ಪ ಸ್ವಲ್ಪ ಫಲಾನುಭವಿಗಳ ಕೈಗೂ ಬಂತು ಸ್ವತ್ತುಗಳ ಖರೀದಿಯಾಗಲೇ ಇಲ್ಲ.

ಬ್ಯಾಂಕಿನ ಅಧಿಕಾರಿಗಳು ಬದಲಾದರು ಪಟೇಲರು ಹಣವನ್ನು ಕಬಳಿಸಿದ ವಿಷಯ ಮರೆಯಾಗಿ ಹೋಯಿತು. ಅಧಿಕಾರಿಗಳು ವಸೂಲಿಗೆ ಬಂದರು. ಅವರು ಪಟೇಲರನ್ನು ಕೇಳಲಿಲ್ಲ. ಆದರೆ ಸಾಲಗಾರರನ್ನು ಕೇಳಿದರು. ಮೊದಲಿಗಿಂತ ಬಡವರಾಗಿದ್ದ ಅವರು ಏನು ಸಾಲ ಮರುಪಾವತಿ ಮಾಡಿಯಾರು? ಇರುವ ಒಂದೆರಡೆಕರೆ ಜಮೀನು,ಜಾನು

[6ನೇ ಪುಟ ನೋಡಿ]

ಸಂಪೂರ್ಣ ಬೇಬಾಕಿಯಾದ ಸಾಲಗಳ ಕಥೆ !!

ಮಧ್ಯ ಪ್ರದೇಶದಲ್ಲಿ ಒಂದು ರಾಷ್ಟ್ರೀಕೃತ ಬ್ಯಾಂಕೊಂದರ ಶಾಖೆ. ಆ ಶಾಖೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಒಳ್ಳೆಯ ಪ್ರಗತಿ ತೋರಿಸಿತು. ಹಲವು ನೂರು ಕುಟುಂಬಗಳಿಗೆ ಆರ್ಥಿಕ ನೆರವು ನೀಡಿತು. ಈ ಫಲಾನುಭವಿಗಳಿಗೆ ಸರ್ಕಾರದಿಂದ ಸಹಾಯ ಧನವೂ ಬಂತು. ಸಹಾಯ ಧನ ಬಂದ ಕೆಲವೇ ತಿಂಗಳಲ್ಲಿ ಎಲ್ಲ ಸಾಲದ ಖಾತೆಗಳು ಬೇಬಾಕಿಯಾದವು. ಇದು ಸ್ವಲ್ಪ ಕುತೂಹಲ ಕೆರಳಿಸಿದ್ದರಿಂದ ಒಂದು ತನಿಖೆ ನಡೆಯಿತು. ತನಿಖೆಯಿಂದ ಕಂಡು ಬಂದದ್ದು ಇದು. ಶಾಖೆಯ ಮ್ಯಾನೇಜರ್ ಬೇನಾಮಿ ಸಾಲಗಳನ್ನು ನೀಡಿದ. ಆತನ ಜೊತೆಗೆ ಇತರ ಕೆಲವು ಸರ್ಕಾರಿ ಅಧಿಕಾರಿಗಳೂ ಸೇರಿದ್ದರು. ಬೇನಾಮಿ ಸಾಲದ ಹಣವನ್ನು ಕಿಸೆಗೆ ಇಳಿಬಿಟ್ಟರು. ಸಹಾಯ ಧನ ಬಂತು. ಇದು ಒಂದೆರಡು ಸಾವಿರ ರೂಪಾಯಿಗಳಲ್ಲ. ಲಕ್ಷಗಟ್ಟಲೇ ರೂಪಾಯಿ ಇಷ್ಟಾದಗಳಲ್ಲಿ ಸಹಾಯ ಧನ ಸಾಲದ ಖಾತೆಗಳಿಗೆ ಜಮಾ ಆಯಿತು. ಇಷ್ಟಾದ ಕೆಲವೇ ತಿಂಗಳುಗಳಲ್ಲಿ ಮ್ಯಾನೇಜರ್ ತಾನು ಕಿಸೆಗೆ ಇಳಿಬಿಟ್ಟದ್ದ ಹಣದಿಂದ ಸಾಲದ ಭಾಗವನ್ನು ಖಾತೆಗಳಿಗೆ ಜಮಾ ಮಾಡಿಬಿಟ್ಟ. ಖಾತೆಗಳು ಬೇಬಾಕಿಯಾದವು. ಲಕ್ಷ ಗಟ್ಟಲೇ ರೂಪಾಯಿಗಳ ಸಹಾಯಧನ ಇವರ ಕಿಸೆಗಳಲ್ಲೇ ಉಳಿಯಿತು.

ಕಾರ್ಯ ಕ್ರಮದ ಕಾರ್ಯರೂಪದಲ್ಲಿ ಜನರ ಸಕ್ರೀಯ ಭಾಗವಿದ್ದರೆ ಇದು ಸಾಧ್ಯವಾಗುತ್ತಿತ್ತೆ ?

ಹಂಪೆಯಲ್ಲಿ ಅಧ್ಯಯನ ಶಿಬಿರ

ಹರಿಯುವ ಜುಳು ಜುಳು ನದಿ ಸುತ್ತ ಬಂಡೆಗಳು. ಪೃಥ್ವಿ ಹಾರುತ್ತಿದೆ. ಕೆಂಪು ಚುಕ್ಕಿಯ ಬಾವುಟ. ಸುಂದರ ಸಂಜೆಯೊಂದರಲ್ಲಿ ಈ ಬಾವುಟದ ನೆರಳಲ್ಲಿ ನಿಂತ ಜನರಿಂದ "ಹೋ ಹಾ !!" 'ಹಿಡಿ, ಬಿಡು, ಔಟ್, ಎಂಬ ಬೊಬ್ಬೆಯೋ ಬೊಬ್ಬೆ, ಈ ಬೊಬ್ಬೆಯ ಹಿನ್ನೆಲೆಯಲ್ಲಿ 'ಕಬಡ್ಡಿ ಕಬಡ್ಡಿ' ಎಂಬ ಮೆಲುದನಿ. ಈ ಎಲ್ಲಾ ಗದ್ದಲ ಎಲ್ಲಿಯದೆನ್ನುವಿರಾ, ಹಂಪೆಯಲ್ಲಿ ಜುಲೈ 22 ರಿಂದ 27ರವರೆಗೆ ನಡೆದ ಎಸ್.ಎಫ್.ಐ. ಶಾಲೆಯದು. ಈ ಕಬಡ್ಡಿ ಪಂದ್ಯದಲ್ಲಿ ಎಸ್‌ಎಫ್‌ಐ ತಂಡಕ್ಕೆ ಸ್ಥಳೀಯ ಹಂಪಿ ಯುತ್ ಕ್ಲಬ್ ಮೇಲೆ46-21 ಪಾಯಿಂಟ್‌ಗಳ ರೋಮಾಂಚಕ ಜಯ. ನಂತರ ಸಮಾಜವಾದಿ ಕ್ರೀಡಾ ನೀತಿ ಹಾಗೂ ಭಾರತದ ಕ್ರೀಡಾನೀತಿಯ ಬಗ್ಗೆ ಚರ್ಚೆಯಲ್ಲಿ ವೈಚಾರಿಕ ಜಯ. ಇದರ ಫಲವಾಗಿ ಈ ಯೂತ್ ಕ್ಲಬ್ ಡಿ.ವೈ.ಎಫ್.ಐ. ಘಟಕವಾಗಲು ಸ್ಫೂರ್ತಿ. ವಾಲಿಬಾಲ್, ಶಾಟ್‌ಪುಟ್, ಬ್ಯಾಡ್‌ಮಿಂಟನ್, ರಿಂಗ್, ಥ್ರೋಬಾಲ್, ಕೇರಂ ಸ್ಪರ್ಧೆಗಳು, ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳಾಗಿ ಕವಿಗೋಷ್ಠಿ ನಾಟಕ. ಕವಿಗೋಷ್ಠಿಯಲ್ಲಿ ಕನ್ನಡ ಕವನಗಳು ಉರ್ದುಶಾಯರಿ, ಹಿಂದಿ ಗೀತೆಗಳು.

ಜೊತೆಗೆ ಚಲನಚಿತ್ರಗಳೂ ಕೂಡನೊಂದಲನೇ ಮಹಾಯುದ್ಧ, ಸೋವಿಯತ್ ಕೈಗಾರಿಕೆ, ಮಕ್ಕಳ ಕ್ರೀಡೆ,ಕವಿ ಡಿ.ವಿ.ಜಿ. ಬಗ್ಗೆ.ಇಷ್ಟೆಲ್ಲಾ ಪರಿಕರಗಳೊಡನೆ ನಡೆದ 100 ವಿದ್ಯಾರ್ಥಿಗಳ ಈ ಶಾಲೆಯ ಉದ್ಘಾಟನೆ ಕಾಂ. ಎನ್ನೆಯವರಿಂದ, ದ್ವಂದ್ವ ಮಾನ ಹಾಗೂ ಚಾರಿತ್ರಿಕ ಭೌತವಾದದ ಬಗ್ಗೆ ಕಾಂ.ಪಿ. ರಾಮಚಂದ್ರರಾವ್, ಜಾಗತಿಕ ಪರಿಸ್ಥಿತಿಯ ಬಗ್ಗೆ ಕಾಂ. ಸಿ.ಎನ್, ಭಾರತೀಯ ಶಿಕ್ಷಣ ಪದ್ಧತಿ ಭಾರತೀಯ ಹಾಗೂ ಅಂತರಾಷ್ಟ್ರೀಯ ವಿದ್ಯಾರ್ಥಿ ಚಳುವಳಿಯ ಬಗ್ಗೆ ಕಾಂ. ವಿಜಯರಾಘವನ್, ಸ್ವಾತಂತ್ರ್ಯ ಹೋರಾಟ ಹಾಗೂ ಸ್ವಾತಂತ್ರ್ಯಾ ನಂತರದ ಭಾರತದ ಬಗ್ಗೆ ಕಾ. ವಿ.ಜೆ.ಕೆ. ವೈಜ್ಞಾನಿಕ ಸಮಾಜವಾದದ ಬಗ್ಗೆ ಕಾಂ. ವಿ.ಎನ್ ದೇಶಪಾಂಡೆ ಇವರಿಂದ ಪಾಠ. ಎಸ್ ಎಫ್. ಐ. ಕಾರ್ಯಕ್ರಮ ಹಾಗೂ ಸಂಘಟನೆಯ ಬಗ್ಗೆ ಕಾಂ. ವಿಶ್ವನಾಥ ಹಾಗೂ ಆರಾಧ್ಯರಿಂದ ವಿವರಣೆ. ಈ ವಿಷಯಗಳ ಬಗ್ಗೆ ಆರು ಗುಂಪುಗಳಾಗಿ ವಿಂಗಡಿತವಾದ ವಿದ್ಯಾರ್ಥಿಗಳಿಂದ ಚರ್ಚೆ ಹಾಗೂ ಪ್ರಶ್ನೆಗಳು.

5 ದಿನಗಳ ಶಾಲೆಯ ನಂತರ 27 ರಂದುಹೊಸ ಪೇಟೆಯಲ್ಲಿ ಮೆರವಣಿಗೆ, ಬಹಿರಂಗ ಸಭೆ.ಎಸ್.ಎಫ್.ಐ. ಅಖಿಲ ಭಾರತ ಉಪಾಧ್ಯಕ್ಷರಾದ ಕೃಷ್ಣಯ್ಯ ಪಿ.ರಾಮಚಂದ್ರರಾವ್ ಹಾಗೂ ಆರಾಧ್ಯರಿಂದ ಭಾಷಣ. ಹೀಗೆ ಕಲಿಕೆಯ ಜೊತೆ ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳನ್ನು ಸೇರಿಸಿ ಬೋಧಿಸಿದ ಪ್ರದವಾಗಿದ್ದ ಈ ಅಧ್ಯಯನ ಶಿಬಿರ ವಿದ್ಯಾರ್ಥಿಗಳ ಮೆಚ್ಚುಗೆಯನ್ನು ಪಡೆಯದಿರಲು ಸಾಧ್ಯವೇ ?.

ಸಿಂಧನೂರಿನಲ್ಲಿ ಗ್ಯಾಸ್ ಸ್ಫೋಟ

ರಾಯಚೂರು ಜಿಲ್ಲೆಯ ಸಿಂಧನೂರು ಬಸ್ ನಿಲ್ದಾಣದಲ್ಲಿರುವ ಶ್ರೀಗಣೇಶ ಭವನ ಹೋಟೆಲ್‌ನಲ್ಲಿ ಜುಲೈ 22 ರಂದುಗ್ಯಾಸ್ ಸಿಲಿಂಡರ್‌ಗಳು ಸ್ಫೋಟಿಸಿ ಸಿಂಧನೂರಿನ ಇತಿಹಾಸದಲ್ಲೇ ನಡೆಯದ ದುರ್ಘಟನೆ ಸಂಭವಿಸಿ 10 ಮಂದಿಗೂ ಮೇಲ್ಪಟ್ಟ ಜನರು ಸತ್ತು ಹಲವಾರು ಶಾಶ್ವತ ಅಂಗವಿಕಲತೆವುಂಟಾಗಿ ಗಾಯಗೊಂಡಿದ್ದಾರೆ. ಹೋಟೆಲ್ ಮಾಲೀಕ ಮುಂಜಾಗ್ರತೆ ವಹಿಸದೇ ಬೇಜವಾಬ್ದಾರಿತನದಿಂದ ಸಂಭವಿಸಿದ ಈ ಘಟನೆಯನ್ನು ಸಿ.ಪಿ. ಐ. (ಎಂ) ಸಿಂಧನೂರು ಘಟಕ ತೀವ್ರವಾಗಿ ಖಂಡಿಸಿದೆ. ಘಟನೆ ಸಂಭವಿಸಿದ ಸುದ್ದಿ ತಿಳಿದ ಕೂಡಲೇ ಪಕ್ಷದ ರಾಯಚೂರು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾ|| ಗಂಗಾಧರ ಕುಷ್ಟಗಿ, ಜಿಲ್ಲಾ ಸಮಿತಿ ಸದಸ್ಯ ಕಾ|| ಬಿ. ಲಿಂಗಪ್ಪನವರು ಬೇಟಿ ನೀಡಿ ಮೃತರಾದವರಿಗೆ ತಮ್ಮ ಸಂತಾಪ ಸೂಚಿಸಿದರು. ಸಾರ್ವಜನಿಕರು, ವಿವಿಧ ಸಂಘ ಸಂಸ್ಥೆಗಳು ಹಣಕಾಸು, ಔಷಧಗಳನ್ನು ಪೂರೈಸಿದರು.

ಹೋಟೆಲ್ ಮಾಲೀಕ ಅಕ್ರಮವಾಗಿ 9 ಗ್ಯಾಸ್ ಸಿಲಿಂಡರ್‌ಗಳನ್ನು ಶೇಖರಿಸಿಟ್ಟದ್ದು ಆಸ್ಫೋಟ ಇಷ್ಟು ದೊಡ್ಡ ಪ್ರಮಾಣದಲ್ಲಿ ಹೆಚ್ಚಿನ ಸಾವು ನೋವುಗಳ ಸಂಭವಿಸಲು ಕಾರಣವಾಗಿದೆ. ಘಟನೆಗೆ ಕಾರಣರಾದ ಮಾಲೀಕರ ಮೇಲೆ ಕ್ರಮ ಜರುಗಿಸಿ ದುರಂತದಲ್ಲಿ ಸತ್ತ ಮತ್ತು ಗಾಯಗೊಂಡವರ ಕುಟುಂಬಗಳಿಗೆ ಮುಖ್ಯ ಮಂತ್ರಿಯವರ ಪರಿಹಾರ ನಿಧಿಯಿಂದ ಕೂಡಲೇ ತಲಾ 25,000 ಸಾವಿರ ಹಾಗೂ ಶಾಶ್ವತ ಅಂಗವಿಕಲರಿಗೆ 15 ಸಾವಿರ, ಗಾಯಾಳುಗಳಿಗೆ ತಲಾ 10 ಸಾವಿರ ಪರಿಹಾರವನ್ನು ಒದಗಿಸಿ ಘಟನೆ ಕುರಿತು ನ್ಯಾಯಾಂಗ ತನಿಖೆ ನಡೆಸಬೇಕೆಂದು ಪಕ್ಷ ಸರ್ಕಾರವನ್ನು ಒತ್ತಾಯಿಸಿದೆ.

ಅಕ್ವ್ಯಾಯರ್ ಗ್ರಾಂಟ್‌ಗೆ ಒತ್ತಾಯ

ರಾಜ್ಯ ಸರ್ಕಾರ ಅಕ್ವ್ಯಾಯರ್ ಗ್ರಾಂಟ್ ಬಿಡುಗಡೆ ಮಾಡುವಲ್ಲಿ ವಿಳಂಬ ನೀತಿಯನ್ನು ಅನುಸರಿಸುತ್ತಿರುವುದನ್ನು ಪೌರ ಕಾರ್ಮಿಕರ ಒಕ್ಕೂಟದ ರಾಜ್ಯ ಅಧ್ಯಕ್ಷರಾದ ಕಾ||ಎನ್. ಕೆ. ಉಪಾಧ್ಯಾಯರು ಖಂಡಿಸಿದ್ದಾರೆ. ವೇಳೆಗೆ ಸರಿಯಾಗಿ ಹಣಬಿಡುಗಡೆಯಾಗದೆ ಪೌರ ಕಾರ್ಮಿಕರಿಗೆ ಕಳೆದ 4ತಿಂಗಳಿಂದ ಸಂಬಳ ನೀಡದಿರುವುದು ಅಕ್ಷಮ್ಯ, ಅಕ್ವ್ಯಾಯರ್ ಗ್ರಾಂಟನ್ನು ಈ ಕೂಡಲೇ ಬಿಡುಗಡೆ ಮಾಡಬೇಕೆಂದು ಸರ್ಕಾರವನ್ನು ಅವರು ಒತ್ತಾಯಿಸಿದ್ದಾರೆ.

ಐ. ಆರ್. ಡಿ. ಪಿ. ಸಾಲ

[5ನೇ ಪುಟದಿಂದ]

ವಾರುಗಳ ಮಾರಾಟ ಮಾಡಲು ತಯಾರಾದರು.

ಇದು ಒಂದೇ ಊರಿನ ಕಥೆಯಲ್ಲ. ಭಾರತದಾದ್ಯಂತ ಹೆಚ್ಚಿನ ಪ್ರಚಾರ ಪಡೆದು ಕಾರ್ಯರೂಪಕ್ಕೆ ಬರುತ್ತಿರುವ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ ಎಂಬ ಮಹತ್ವಾಕಾಂಕ್ಷೆಯ ಕಾರ್ಯಕ್ರಮದ ಕಥೆ ಈ ಕಥೆಯ ತೀವ್ರತೆ ಕೆಲವು ಕಡೆ ಹೆಚ್ಚಿದ್ದೀತು. ಕೆಲವು ಕಡೆ ಕಡಿಮೆ ಅಷ್ಟೇ.

1976-77ರಲ್ಲಿ ಪ್ರಾಯೋಗಿಕವಾಗಿ 20 ಜಿಲ್ಲೆಗಳಲ್ಲಿ ಮಾತ್ರ ಕಾರ್ಯರೂಪಕ್ಕೆ ಬಂದ ಈ ಕಾರ್ಯಕ್ರಮ 1981-82ರಿಂದ ದೇಶಾದ್ಯಂತ ಕಾರ್ಯರೂಪಕ್ಕೆ ಬಂದಿರುವ ಈ ಕಾರ್ಯಕ್ರಮಕ್ಕೆ ಎರಡು ಹಂತಗಳಿವೆ.

1. ಮೊದಲನೇ ಹಂತದಲ್ಲಿ ಜಿಲ್ಲಾವಾರು ಮತ್ತು ಕ್ಷೇತ್ರವಾರು ಸಂಪನ್ಮೂಲಗಳ ಪಟ್ಟಿ ಮಾಡುವುದು. ಆರ್ಥಿಕ ಸಮಸ್ಯೆಗಳನ್ನು ಗುರುತಿಸಿ ಅವುಗಳ ಪರಿಹಾರಕ್ಕೆ ಅಂದರೆಉತ್ಪನ್ನ ಹೆಚ್ಚಿಸಲು ಕಾರ್ಯ ಯೋಜನೆ ರೂಪಿಸುವುದು.
2. ಹೀಗೆ ರೂಪಿಸಿದ ಯೋಜನೆಯನ್ನು ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಚೌಕಟ್ಟಿನಲ್ಲಿ ಕಾರ್ಯರೂಪಕ್ಕೆ ತರುವುದು.

ಉದ್ದೇಶ: ಬಡವರಲ್ಲಿ ಬಡವರನ್ನು ಅಂತ್ಯೋದಯ ತತ್ವದ ಮೇಲೆ ಆಯ್ಕೆ ಮಾಡಿ ಅವರಿಗೆ ಧನಸಹಾಯ ನೀಡಿ ಅವರು ಬಡತನ ರೇಖೆಯಿಂದ ಮೇಲೆ ಬರುವಂತೆ ಮಾಡುವುದು.

ಗುರಿ: ಆರನೇಯ ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಯಕ್ರಮದ ಗುರಿ ಹೀಗಿತ್ತು. ಪ್ರತಿಕ್ಷೇತ್ರದಲ್ಲಿ ವರ್ಷವೊಂದಕ್ಕೆ ಆರುನೂರು ಬಡ ಕುಟುಂಬಗಳನ್ನು ಆಯ್ಕೆಮಾಡಿ ಅವರನ್ನು ಬಡತನ ರೇಖೆಯಿಂದ ಮೇಲೆತ್ತುವುದು.

ಸರ್ಕಾರಿ ದಾಖಲೆಗಳ ಪ್ರಕಾರ ಈ ಕಾರ್ಯಕ್ರಮದಿಂದ ಪ್ರಯೋಜನ ಪಡೆದ ಶೇಕಡಾ 18.7 ರಷ್ಟು ಕುಟುಂಬಗಳು ಬಡತನ ರೇಖೆಗಿಂತ ಮೇಲಕ್ಕೆ ಬಂದಿವೆ. ಆದರೆ ಇದು ಸತ್ಯಕ್ಕೆ ಎಷ್ಟು ಹತ್ತಿರ? ಇದು ಸರಿಯೆಂದು ಒಪ್ಪಿಕೊಂಡರೂ ಸಾಧನೆಯೇನು?

ರಾಷ್ಟ್ರೀಯಕೃಷಿಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು ನಡೆಸಿದ ಸಮೀಕ್ಷೆಯ ವರದಿಯೊಂದರಭಾಗದಲ್ಲಿ ಹೀಗೆ ಹೇಳಲಾಗಿದೆ. 'ಯಾವುದೇ ಬಡತನ ನಿರ್ಮೂಲನಾ ಕಾರ್ಯಕ್ರಮ ದೊಡ್ಡ ಪ್ರಮಾಣದಲ್ಲಿ ವಿಫಲಗೊಂಡಾಗ ಅದು ಕಡುಬಡವರನ್ನು ಮತ್ತು ಬಡಕೂಲಿಕಾರರನ್ನು ಅತ್ಯಂತ ತೊಂದರೆಗೊಳಪಡಿಸಿದ್ದಾರೆ. ಇದು ನಾವುಮೇಲೆ ತೆಗೆದುಕೊಂಡ ಉದಾಹರಣೆಯಿಂದಲೂ ಸ್ಪಷ್ಟವಲ್ಲವೆ?

(4ನೇ ಪುಟದಿಂದ)

ಕಾರಿಗಳು ಸಾಲಮೇಳ ಭರ್ಜರಿಯಾಗಿ ದಪ್ಪು ಪೂಜಾರಿಯವರಿಂದ ವರ ಪಡೆಯುತ್ತಾರೆ. ತಪ್ಪಿದರೆ ಶಾಪಪಡೆಯುತ್ತಾರೆ. ಭಾರತೀಯ ಸ್ಟೇಟ್ ಬ್ಯಾಂಕಿನ ಅಧಿಕಾರಿಗಳು ದಕ್ಷಿಣ ಕನ್ನಡಜಿಲ್ಲೆಯಲ್ಲಿ ಕಳೆದ ಸಾರಿ ಒಗ್ಗಟ್ಟಾಗಿ ಪ್ರತಿಭಟಿಸಿದರು. ನಿಯಮಕ್ಕೆ ಅನುಸಾರವಾಗಿ ಕೆಲಸ ಎಂದರು. ಆ ಪ್ರತಿಭಟನೆಯ ಗಾಳಿ ಎಲ್ಲಾ ಕಡೆಗೂ ಹಬ್ಬುತ್ತಿದೆ. ಈ ಪ್ರತಿಭಟನೆ ಏನಿದ್ದರೂ ಕಿರಿಯ ಅಧಿಕಾರಿಗಳಿಂದ ಮಾತ್ರ ಮತ್ತು ಅವರ ಸಂಖ್ಯೆಯೂ ಹೆಚ್ಚು ಇದ್ದುದರಿಂದ ಅದು ಬಲವಾಗುವ ಸಾಧ್ಯತೆ ಇದೆ.

ಅಖಿಲ ಭಾರತ ಸಾರಿಗೆ ಸಪ್ತಾಹ

ಸಾರಿಗೆ ಸಚಿವರೊಡನೆ ಮಾತುಕತೆ

ಅಖಿಲ ಭಾರತ ರಸ್ತೆ ಸಾರಿಗೆ ಕಾರ್ಮಿಕರ ಒಕ್ಕೂಟ (ಎ.ಐ.ಆರ್.ಟಿ.ಡಬ್ಲ್ಯೂ.ಎಫ್.) ಜುಲೈ 25ರಿಂದ 31ರವರೆಗೆ ದೇಶದಾದ್ಯಂತ ಬೇಡಿಕೆ ವಾರಾಚರಣೆ ಆಚರಿಸಲು ನೀಡಿದ ಕರೆಯಂತೆ, ಬೆಂಗಳೂರಿನಲ್ಲಿ ಆಟೋರಿಕ್ಷಾ ಡ್ರೈವರ್ಸ್ ಯುನಿಯನ್ [ಎ.ಆರ್.ಡಿ.ಯು] ರಸ್ತೆ ಸಾರಿಗೆ ಕಾರ್ಮಿಕರ 33 ಬೇಡಿಕೆ ಆಟೋರಿಕ್ಷಾ ಚಾಲಕರ17 ಬೇಡಿಕೆಗಳನ್ನೊಳಗೊಂಡ ಪ್ರತ್ಯೇಕ ಕರಪತ್ರ ಮುದ್ರಿಸಿ ದೊಡ್ಡಪ್ರಮಾಣದ ಪ್ರಚಾರ ಕಾರ್ಯ ಕೈಗೊಂಡಿತು. ನಗರದ ಬಿ.ಟಿ.ಎಸ್. ನಿಲ್ದಾಣ,ಡಿಪೋ, ಖಾಸಗಿ ಬಸ್ ನಿಲ್ದಾಣ, ಆಟೋ ನಿಲ್ದಾಣಗಳಲ್ಲಿ ಕರಪತ್ರ ಹಂಚಿ ಸಣ್ಣ ಸಣ್ಣ ಗುಂಪು ಸಭೆಗಳನ್ನು ನಡೆಸಿತು. ಜುಲೈ 31ರಂದು ಬೇಡಿಕೆಗಳನ್ನು ಒತ್ತಾಯಿಸಿ ವಿಧಾನ ಸೌಧದ ಮುಂದೆ ಧರಣಿ ಸತ್ಯಾಗ್ರಹ ನಡೆಸಿ ರಾಜ್ಯದ ಸಾರಿಗೆ ಸಚಿವ ಪಿ.ಜಿ.ಆರ್‌ಸಿಂಧ್ಯರವರಿಗೆಸಂಧಾನ ಸಮಿತಿ ರಚನೆ, ಪರಿಚಯ ಪತ್ರ ಗ್ರಾಚ್ಯುಯಿಟಿ ಭವಿಷ್ಯನಿಧಿ, ಕೆಲಸದ ಭದ್ರತೆ, ಅಪಘಾತ ಪರಿಹಾರ ಪೋಲೀಸ್ ಕಿರುಕುಳ, ಆರ್.ಟಿ.ಓ ವಿಧಿಸು ತೆರಿಗೆಯಲ್ಲಿ ಕಡಿತ ಅಗ್ಗದ ದರದಲ್ಲಿ ಬಿಡಿಭಾಗ ಒದಗಿಸುವುದು ಮುಂತಾದ ಬೇಡಿಕೆಗಳು ಪ್ರಮುಖ.

ಬೇಡಿಕೆಗಳ ಮನವಿ ಪತ್ರ ಅರ್ಪಿಸಲಾಯಿತು. ಬೇಡಿಕೆಗಳ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿದ ಸಚಿವರು ಆಗಸ್ಟ್ 9ರಂದು ಮತ್ತೊಂದು ಸುತ್ತಿನ ಮಾತು ಕತೆಗಾಗಿ ಆಹ್ವಾನಿಸಿದ್ದಾರೆ. ಸಂಘದ ಪ್ರ.ಕಾರ್ಯದರ್ಶಿ, ಕಾ.ಎ.ವಿ ರಮೇಶ್ ಅಧ್ಯಕ್ಷ ಕಾ. ಜಿ.ಸುಬ್ಬರಾವ್ ಸಂಘಟನಾ ಕಾರ್ಯದರ್ಶಿ ಕಾ. ನಾರಾಯಣ ಮೂರ್ತಿ, ಹಾಗೂ ಕಾ.ಬಾಲಕೃಷ್ಣರವರು ನೇತೃತ್ವ ವಹಿಸಿದ್ದರು.

ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ

ಭಾಗಲ ಕೋಟೆ

ಜನತಾ ಸರ್ಕಾರದ ವಿದ್ಯುತ್ ಹಾಗೂ ದರ ಏರಿಕೆ ವಿರುದ್ಧ ಬಿಜಾಪುರದಭಾಗಲಕೋಟೆಯ ವಿದ್ಯುತ್‌ಮಂಡಳಿ ಆಫೀಸಿನ ಎದುರು ಸಿಮೆಂಟ್‌ಕೆಲಸಗಾರರು, ಜೀವವಿಮಾನೌಕರರ ಸಂಘ, ರೈತ ಸಂಘದ ಕಾರ್ಯಕರ್ತರು ಧರಣಿ ಸತ್ಯಾಗ್ರಹ ನಡೆಸಿದರು. ಧರಣಿಯನ್ನುದ್ದೇಶಿಸಿ ಕಾ|| ಎಚ್.ಬಿ.ದಾಸರ, ಕಾ||ಪಿ.ವೈ.ಅಜ್ಜೋಡಿ,ಕಾಂ.ಡಿ.ಎಂ. ಖಲಾಸಿ ಯುವರುಗಳು ಮಾತನಾಡಿದರು.

ಹಾಸನ

ಜುಲೈ 17 ರಂದು ಹಾಸನದಲ್ಲಿ ಸಿ.ಐ.ಟಿ.ಯು. ಹಾಗೂ ಡಿ.ವೈ.ಎಫ್. ಐ. ಕಾರ್ಯಕರ್ತರು ಜನತಾ ಸರ್ಕಾರದ ಬೆಲೆ ಏರಿಕೆ ವಿರೋಧಿಸಿ ಪ್ರತಿಭಟನಾ ಪ್ರದರ್ಶನ ನಡೆಸಿದರು. ಕಾಂ. ಕೆ.ಟಿ. ರಾಘವೇಂದ್ರ ಹಾಗೂ ಜಿ.ಪಿ. ಸತ್ಯನಾರಾಯಣರವರು ಮೆರವಣಿಗೆಯ ನೇತೃತ್ವ ವಹಿಸಿದ್ದರು.

ಬೇಲೂರು

ಬೇಲೂರಿನ ವಿದ್ಯುಚ್ಛಕ್ತಿ ಕಛೇರಿಯ ಮುಂದೆ ಜುಲೈ 17 ರಂದು ಕಾಂ. ಸೋಮಶೇಖರ್‌ರವರ ನೇತೃತ್ವದಲ್ಲಿ ಬೆಲೆ ಏರಿಕೆ ಪ್ರತಿಭಟಿಸಿ ಧರಣಿ ಸತ್ಯಾಗ್ರಹವನ್ನು ನಡೆಸಲಾಯಿತು. ಧರಣಿಯಲ್ಲಿ ಸುಮಾರು 70 ಮಂದಿ ಪಾಲ್ಗೊಂಡಿದ್ದರು. ಕರಪತ್ರ ಮುದ್ರಿಸಿ ಹಂಚಲಾಗಿದೆ.

ಕೋಲಾರ ಜಿಲ್ಲೆ

ಚಿಂತಾಮಣಿಯ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ಹೋಟೆಲ್ ತಿಂಡಿ ದರ, ಸಿನಿಮಾದರ ವಿದ್ಯುತ್ ಹಾಲಿನ ಬೆಲೆ ಏರಿಕೆ ಪ್ರತಿಭಟಿಸಿ ಸುಮಾರು ಒಂದು ಸಹಸ್ರ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಮೆರವಣಿಗೆ ನಡೆಸಿ ತಹಸೀಲ್ದಾರ್ ರವರಿಗೆ ಮನವಿ ಅರ್ಪಿಸಿದ್ದರು. ಮೆರವಣಿಗೆಯ ನೇತೃತ್ವವನ್ನು ಕಾ. ಎಂ. ಎಸ್. ಆನಂದ್ ಎನ್. ರಾಮಚಂದ್ರ, ಕೆ.ಜಿ. ರಾಮಕೃಷ್ಣ, ಪ್ರಸಾದ್‌ರವರುಗಳು ವಹಿಸಿದ್ದರು.

ಮಾಲೂರು

ಸುಮಾರು500 ಮಂದಿ ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳನ್ನು ಬಹಿಷ್ಕರಿಸಿ ಟೌನ್‌ನಲ್ಲಿ ಮತಪ್ರದರ್ಶನ ನಡೆಸಿ ತಹಸೀಲ್ದಾರ್‌ರವರಿಗೆ ಮನವಿ ಅರ್ಪಿಸಿತು. ಮೆರವಣಿಗೆಯ ನೇತೃತ್ವವನ್ನು ಕಾಂ. ಎಂ. ಹರಿಪ್ರಕಾಶ್ ಕಾ. ದೇವರಾಜು, ಕಾ.ಸಿ. ನಾರಾಯಣ ಸ್ವಾಮಿ, ಎಸ್.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಜಿ.ಸಿ. ಬೈಯಾರೆಡ್ಡಿ, ರೈತ ಸಂಘದ ಮುಖಂಡರಾದ ಕಾ. ರಾಮಯ್ಯನವರು ವಹಿಸಿದ್ದರು.

ಬಾಗೇಪಲ್ಲಿ

ಜುಲೈ 17ರಂದು ಎಸ್.ಎಫ್.ಐ. ನೇತೃತ್ವದಲ್ಲಿ ವಿದ್ಯಾರ್ಥಿಗಳು ರಾಜ್ಯ ಸರ್ಕಾರದ ಬೆಲೆ ಏರಿಕೆ ಪ್ರತಿಭಟಿಸಿ ಮೆರವಣಿಗೆಯಲ್ಲಿ ತಾಲ್ಲೂಕು ಕಛೇರಿಗೆ ತೆರಳಿ ಮನವಿ ಪತ್ರ ಅರ್ಪಿಸಿದರು. ಕಾ.ಲಕ್ಷ್ಮೀನಾರಾಯಣ, ನರಸಿಂಹರೆಡ್ಡಿಯವರು ನಾಯಕತ್ವ ವಹಿಸಿದ್ದರು.

ಮುಳಬಾಗಿಲು

ಜುಲೈ 17ರಂದು ರೈತ ಸಂಘ, ಸಿ.ಪಿ.ಐ. [ಎಂ]ಹಾಗೂ ಎಸ್.ಎಫ್.ಐ.ನ ಕಾರ್ಯಕರ್ತರು ಬೆಲೆಏರಿಕೆ ವಿರುದ್ಧ ಪ್ರತಿಭಟನಾ ಪ್ರದರ್ಶನ ನಡೆಸಿ ತಹಸೀಲ್ದಾರ್‌ರವರಿಗೆ ಮನವಿ ಅರ್ಪಿಸಿ ಬಹಿರಂಗ ಸಭೆಯನ್ನು ನಡೆಸಿದರು. ಸಭೆಯಲ್ಲಿ ಶಾಸಕರಾದ ಕಾ. ಆರ್. ವೆಂಕಟರಾಮಯ್ಯ ರೈತ ಸಂಘದ ನಾಯಕರು ಹಾಗೂ ವಿದ್ಯಾರ್ಥಿ ಮುಖಂಡ ಕಾ. ಶಿವಶಂಕರಪ್ಪ ಮಾತನಾಡಿದರು.

ಹಿರೋಷಿಮಾ — ನಾಗಸಾಕಿಯ ದಾರುಣ ನೆನಪು

ಆಗಸ್ಟ್ 6 ಹಾಗೂ ಒಂಭತ್ತು ಇಡೀ ಮಾನವ ಜನಾಂಗದ ಅಷ್ಟೇ ಏಕೆ ಇಡೀ ಸಚರಾಚರ ಜಗತ್ತಿನ ಇತಿಹಾಸದಲ್ಲಿಯೇ ಅತ್ಯಂತ ಭೀಕರವಾದ ಘಟನೆ ನಡೆದ ದುರ್ದಿನಗಳು. ಕದನದ ಎಲ್ಲ ರಂಗಗಳಲ್ಲಿ ಸೋತು ಶರಣಾಗಲಿದ್ದ ಜಪಾನಿನ ಮೇಲೆ ಕೇವಲ ತಮ್ಮ ಕ್ಷಣಿಕ ಮೇಲ್ಮೆಯನ್ನು ಸಾಧಿಸಲಿಕ್ಕಾಗಿ ಅಣು ಬಾಂಬ್ ಹಾಕಿದ ಮಾನವದ್ರೋಹಿ ಘಟನೆ ನಡೆದುದು ಅಂದು.

1945ರ ಆಗಸ್ಟ್ 6ರಂದು ಹಿರೋಷಿಮಾದ ಜನ ಬೆಳಗಾಗೆದ್ದು ತಮ್ಮ ದಿನ ನಿತ್ಯದ ಘಟನೆಗಳಲ್ಲಿ ತೊಡಗಿದ್ದರು. 8–30ರ ಸುಮಾರಿಗೆ ವಿಮಾನದ ರೂಪದಲ್ಲಿ ಬಂದೆರಗಿದ ರಣಹದ್ದು ಕ್ಷಣಾರ್ಧದಲ್ಲಿ ಹಿರೋಷಿಮಾವನ್ನು ನರಕವನ್ನಾಗಿ ಪರಿವರ್ತಿಸಿತು. 580 ಮೀಟರ್ ಎತ್ತರದಿಂದ "Little Boy" (ಪುಟಾಣಿ ಮಗು) ಎಂಬ ಬಾಂಬ್ ಸಿಡಿಯಿತು. ಕಿವಿಗಡಚಿಕ್ಕುವ ಅಸ್ಫೋಟದಿಂದ ಸಿಡಿದ ಈ ಬಾಂಬ್ ಸೂರ್ಯನೊಡನೆ ಪ್ರತಿ ಸ್ಪರ್ಧೆಗಿಳಿದ ಮರಿ ಸೂರ್ಯನಂತೆ ಕಂಡಿತು. ಅವರಾರಿಗೂ ಇವೇನೆಂಬುದು ಅರ್ಥವಾಗಲೇ ಇಲ್ಲ. ಈ ಘಟನೆಯ ತಕ್ಷಣ ಅವರೆಲ್ಲರಿಗೂ ತಾವೆಲ್ಲಾ ನರಕಕ್ಕೆ ತಳ್ಳಲ್ಪಟ್ಟದ್ದೇವೆಂಬ ಅನುಭವವಾಗತೊಡಗಿತು. ಈ ಬೆಳಕನ್ನು ಕಂಡವರು ಕುರುಡರಾದರು, ಶಬ್ದ ಕೇಳಿದವರು ಕಿವುಡರಾದರು. ತಮ್ಮ ಸುತ್ತಲಿನ ಗಾಳಿ ಹತ್ತಿ ಉರಿಯತೊಡಗಿತು. ಜನ ಭಯ ಭೀತರಾಗಿ ದಿಕ್ಕಾ ಪಾಲಾಗಿ ಓಡತೊಡಗಿದರು. ಎರಡು ಕಿಲೋಮೀಟರ್ ವ್ಯಾಪ್ತಿಯಲ್ಲಿನ ಎಲ್ಲಾಪ್ರದೇಶ ಸುಟ್ಟು ಕರಕಲಾಯಿತು. ಬೆಂಕಿಯ ಬಿರುಗಾಳಿ ತನ್ನ ಕೆನ್ನಾಲಗೆಯನ್ನು ಚಾಚುತ್ತ ಎಲ್ಲಾ ದಿಕ್ಕುಗಳಿಗೂ ಹಬ್ಬತೊಡಗಿತು. ಮಕ್ಕಳು, ಹೆಂಗಸರು, ನಾಗರಿಕರೂ, ಸೈನಿಕರು, ನಿವಾಸಿಗಳು, ಪ್ರವಾಸಿಗಳು, ಆಸ್ಪತ್ರೆಗಳು, ಶಾಲೆಗಳೂ ಯಾವ ಬೇದ ಭಾವವಿಲ್ಲದೆ ಬೆಂಕಿಗೆ ಆಹುತಿಯಾದವು ಸ್ವಲ್ಪ ಸಮಯದಲ್ಲಿ. ಅವರಲ್ಲಿ ಅಳಿದುಳಿದ ಬಹುಪಾಲು ಜನ ಊದಿದ ಹೊಟ್ಟೆ, ಬೆಂದಮೈ, ಕೂದಲುದುರಿದ ಬೋಡು ತಲೆ, ಕಿತ್ತುಬಂದ ಕಣ್ಣುಗಳುಳ್ಳ ತಮ್ಮ ಸಹಜೀವಿಗಳನ್ನು ಕಾಣಲಾರಂಬಿಸಿದರು. ಅವರ ಮೈಮೇಲಿನ ಚರ್ಮ ಸುಲಿದು ಚಿಂದಿ ಬಟ್ಟೆಯಂತೆ ನೇತಾಡುತ್ತಿತ್ತು. ಬಾಂಬ್ ಸಿಡಿದ 13ಕಿ.ಮೀ. ದೂರದವರೆಗಿನ ಪ್ರದೇಶದ ಜನ ಅಪಾರ ಹಾನಿಗೀಡಾದರು.

ಇಂದಿನ ಪರಮಾಣು ಬಾಂಬ್‌ಗಳಿಗೆ ಹೋಲಿಸಿದರೆ ಈ ಪುಟಾಣಿ ಮಗು ಭ್ರೂಣ ಸಹ ಅಲ್ಲ. ಈ ಪುಟಾಣಿ ಮಗುವಿನ ಸಾಮರ್ಥ್ಯ ಕೇವಲ 12.5 ಕಿಲೋಟನ್ ಮಾತ್ರ. [ಇಂದು ಪರಮಾಣು ಬಾಂಬ್‌ಗಳ ಸಾಮರ್ಥ್ಯವನ್ನು ಮೆಗಾಟನ್‌ಗಳಲ್ಲಿ ಅಳೆಯುತ್ತಾರೆ. ಒಂದು ಮೆಗಾಟನ್ ಎಂದರೆ 10ಲಕ್ಷ ಟನ್] ಇದರಲ್ಲಿದ್ದ ಪರಮಾಣು ಇಂಧನ ಕೇವಲ 1ಕೆ.ಜಿ. ಯುರೇನಿಯಂ 235. ಇಂತಹ ಒಂದು ಬಾಂಬ್ ಹಿರೋಷಿಮಾದ 3.5ಲಕ್ಷ ಜನರ ಪೈಕಿ 1.4ಲಕ್ಷ ಜನರನ್ನು ಕೊಂದಿತು. ಪರಮಾಣು ಬಾಂಬ್ ಸಿಡಿದ ಹೈಪೋ ಸೆಂಟರ್‌ನಿಂದ 13ಕಿ.ಮೀ ವ್ಯಾಪ್ತಿಯಲ್ಲಿನ ಪ್ರದೇಶ ಅಪಾರ ಹಾನಿಗೊಳಗಾಯಿತು. ಈ ಪ್ರದೇಶದಲ್ಲಿನ ಸುಮಾರು 76,000 ಕಟ್ಟಡಗಳು ಸಿಡಿದು ಸುಟ್ಟು ನಾಶವಾದವು. ಈ ಬಾಂಬ್ ಧಾಳಿಗೆ ತುತ್ತಾದ ಶೇ.90 ಜನ ಧಾಳಿಯ 14 ದಿನಗಳೊಳಗಾಗಿ ಸಾವನ್ನಪ್ಪಿದರು. ಈ ಸಾವಿನ ಸಂಖ್ಯೆ 1950ರವರೆಗೂ ಏರುತ್ತಾ ಹೋಯಿತು. ಇಂತಹ ಒಂದು ಧಾಳಿಯಿಂದಲೇ ತೃಪ್ತರಾಗದ ರಕ್ತಪಿಪಾಸು ಸಾಮ್ರಾಜ್ಯಶಾಹಿಗಳು ಪುಟ್ಟ ದೇಶ ಜಪಾನನ್ನು ಮಣಿಸಲು 3ದಿನಗಳ ನಂತರ ಮತ್ತೊಮ್ಮೆ ನಾಗಸಾಕಿ ಪಟ್ಟಣದ ಮೇಲೆರಗಿದರು. ಈ ಧಾಳಿಯಲ್ಲಿ ಅವರು 225ಕಿಲೋಟನ್ ಸಾಮರ್ಥ್ಯದ "Fat Man" (ದಪ್ಪ ಮನುಷ್ಯ) ಎಂಬ ಬಾಂಬನ್ನು ಸಿಡಿಸಿ 70,000 ಜನರನ್ನು ಬಲಿತೆಗೆದುಕೊಂಡರು.

ಈ ಎರಡೂ ಬಾಂಬ್ ಧಾಳಿಗಳು ಮುಖ್ಯವಾಗಿ 3ರೀತಿಯಲ್ಲಿ ಅಪಾರ ಹಾನಿಯನ್ನುಂಟುಮಾಡಿದವು. ಅವುಗಳೆಂದರೆ 1) ಶಾಖ ಪ್ರಭೆ (Thormal Radiation) 2) ಸಿಡಿತದ ಅಲೆ (Blast Wave) 3) ಪರಮಾಣು ವಿಕಿರಣಗಳು (Nuclear Radiations). ಪರಮಾಣು ಬಾಂಬ್ ಸಿಡಿತದಿಂದ ಬಿಡುಗಡೆಯಾದ ಒಟ್ಟು ಚೈತನ್ಯದ ಶೇ.35 ಭಾಗ ಶಾಖಪ್ರಭೆಯಾಗಿಯೂ, ಶೇ.50ಭಾಗ ಸಿಡಿತದ ಅಲೆಯಾಗಿಯೂ ಉಳಿದ ಶೇ. 15ಭಾಗ ವಿಕಿರಣದ ರೂಪವನ್ನು ಪಡೆಯಿತು. ಪರಮಾಣು ಬಾಂಬ್ ಸಿಡಿದ ಕ್ಷಣದಲ್ಲಿಯೇ ಉಷ್ಣತೆ ಹಲವಾರು ಮಿಲಿಯನ್ ಡಿಗ್ರಿಗಳಷ್ಟು ಹೆಚ್ಚಾಯಿತು. ಈ ಅಗಾಧವಾದ ಶಾಖ ತನ್ನ ಸುತ್ತಲಿನ ಗಾಳಿಯನ್ನು ಬೆಂಕಿಯ ಉಂಡೆಯನ್ನಾಗಿಸಿತು. ಈ ಉಂಡೆಯ ಮೇಲ್ಮೈ ಉಷ್ಣತೆ ಸುಮಾರು 7500 ಡಿಗ್ರಿ ಸೆ. ಈ ಅಪಾರ ಉಷ್ಣತೆ ಕ್ಷಣಾರ್ಧದಲ್ಲಿ ಎಲ್ಲಾ ದಿಕ್ಕುಗಳಿಗೂ ಹರಡಿ ಒಳಕೇಂದ್ರದಿಂದ ಸುಮಾರು 1.6ಕಿ ಮೀ. ವ್ಯಾಪ್ತಿಯಲ್ಲಿನ ಪ್ರದೇಶದಲ್ಲಿ ಸುಮಾರು 573ಡಿಗ್ರಿಸೆ. ನಷ್ಟಾವಾಯಿತು. ಯಾವ ರಕ್ಷಣೆಯೂ ಇಲ್ಲದ ಈ ಪ್ರದೇಶದಲ್ಲಿನ ಜನ 3ನೇ ದರ್ಜೆಯ ಸುಟ್ಟ ಗಾಯಗಳಿಗೆ ಗುರಿಯಾಗಿ ಒಂದು ವಾರದೊಳಗೆ ಸಾವನ್ನಪ್ಪಿದರು. ಈ ಶಾಖ ದಿಂದ ಮನೆಗಳು ಮರಗಿಡಗಳು ಇತರ ವಸ್ತುಗಳು ಹತ್ತಿ ಉರಿದು ಮ.ತ್ತಷ್ಟು ಶಾಖ ಬಿಡುಗಡೆಯಾಯಿತು. ಈ ಬೆಂಕಿಯ ಬಿರುಗಾಳಿ ಸುಮಾರು 6ಗಂಟೆಗಳ ಕಾಲ ಉರಿದು ನಂತರ ತಣ್ಣಗಾಯಿತು. ಈ ರೀತಿ ಉರಿದ ವಸ್ತುಗಳ ಬೂದಿ, ಗಾಳಿಯ ಸಮೇತ ಮೇಲಕ್ಕೆ ಹೋಯಿತು. ಈ ರೀತಿ ಉಂಟಾದ ಕಡಿಮೆ ಒತ್ತಡ ಪ್ರದೇಶವನ್ನು ತುಂಬಲು ಬೇರೆ ಬೇರೆ ದಿಕ್ಕುಗಳಿಂದ ಗಾಳಿ ಒಳಕೇಂದ್ರದ ಕಡೆಗೆ ಸುಮಾರು 8ಮೀ/ಸೆ. ವೇಗದಲ್ಲಿ ಬೀಸಲಾರಂಭಿಸಿತು. ಮೇಲಕ್ಕೆ ಹೋದ ಬೂದಿ ತಂಪಾದ ನಂತರ ಗಾಳಿ ಬೀಸಿದ ದಿಕ್ಕಿಗೆ ಚಲಿಸಿ "ಕಪ್ಪು ಮಳೂರು ರೂಪದಲ್ಲಿ ಉದುರಿ ಅಪಾರ ಹಾನಿಯನ್ನು ನೆರೆಯ ಪ್ರದೇಶದಲ್ಲಿ ಉಂಟು ಮಾಡಿತು.

ಶಾಖ ಪ್ರಭೆಯ ಹಿಂದೆಯೇ ಸಿಡಿತದ ಅಲೆಯುಂಟಾಯಿತು. ಈ ಸಿಡಿತದ ಅಲೆಯುಂಟಾಗಲು ಬಹಳ ಮುಖ್ಯ ಕಾರಣ ಸಿಡಿತದ ಸಂದರ್ಭದಲ್ಲಿ ಮತ್ತು ಅನಂತರ ಬಿಡುಗಡೆಯಾದ ಅಪಾರಶಾಖಮತ್ತು ಅದರಿಂದುಂಟಾದ ಅಪಾರ ಒತ್ತಡ. ಈ ಸಿಡಿತದ ಅಲೆ ಎಲ್ಲಾ ದಿಕ್ಕುಗಳಲ್ಲೂ ಶಬ್ಧದ ವೇಗದಲ್ಲಿ ಚಲಿಸಿ ಕಟ್ಟಡಗಳನ್ನು ಕೆಡವತೊಡಗಿತು. ಅನೇಕ ವ್ಯಕ್ತಿಗಳು ಮರಮುಟ್ಟುಗಳೊಂದಿಗೆ ಈ ಅಪಾರ ಸಿಡಿತದ ಅಲೆಯಲ್ಲಿ ಹಾರಿಕೊಂಡು ಹೋದರು. ಬೆಂಕಿಗೆ ಆಹುತಿಯಾಗದ ಎಷ್ಟೋ ಕಟ್ಟಡಗಳು ಈ ಸಿಡಿತದ ಅಲೆಯಿಂದ ಉರುಳಿ ಬಿದ್ದವು. ಈ ಕಟ್ಟಡಗಳಲ್ಲಿ ರಕ್ಷಣೆ ಪಡೆದಿದ್ದ ಅನೇಕರು ಈ ಕಟ್ಟಡಗಳ ಉರುಳುವಿಕೆಯಿಂದ ಸಾವು ನೋವಿಗೆ ಗುರಿಯಾಗಬೇಕಾಯಿತು.

ಪರಮಾಣು ಬಾಂಬಿನ ಸಿಡಿತದಿಂದ ಬಿಡುಗಡೆಯಾದ ವಿಕಿರಣಗಳು 2 ರೀತಿಯವಾಗಿದ್ದವು.

1. ತತ್‌ಕ್ಷಣ ಬಿಡುಗಡೆ ಹೊಂದಿದ ವಿಕಿರಣಗಳು

2. ಉಳಿಕೆ ಪೇರಿತ ವಿಕಿರಣಗಳು

ತತ್‌ಕ್ಷಣ ಬಿಡುಗಡೆ ಹೊಂದಿದ ವಿಕಿರಣಗಳಲ್ಲಿ ಆಲ್ಫಾ ಬೀಟ ಮತ್ತು ಗಾಮಾಕಿರಣಗಳ ಜೊತೆಗೆ ನ್ಯೂಟ್ರಾನ್‌ಗಳಿದ್ದವು. ಈ ವಿಕಿರಣಗಳ ಪೈಕಿ ಗಾಮಾಕಿಕರಣಗಳುಮತ್ತು ನ್ಯೂಟ್ರಾನ್‌ಗಳು ಮನುಷ್ಯ, ಪ್ರಾಣಿ ಹಾಗೂ ಸಸ್ಯಗಳ ಮೇಲೆ ಅಪಾರ ದುಷ್ಪರಿಣಾಮಗಳನ್ನುಂಟು ಮಾಡಿದವು. ಒಳಕೇಂದ್ರದ ಸುಮಾರು 1 ಕಿ.ಮೀ. ವ್ಯಾಪ್ತಿಯಲ್ಲಿನ ಪ್ರದೇಶದಲ್ಲಿ ಈ ವಿಕಿರಣ ತೀವ್ರತೆ ಸುಮಾರು 350 ರ್‍ಯಾಡ್ ಇದ್ದು ಅವರೆಲ್ಲರೂ ಕ್ರಮೇಣ ಸಾವಿಗೀಡಾದರು. ಬೀಜ ವಿದಳನ ಕ್ರಿಯೆಯಲ್ಲಿ ಬಿಡುಗಡೆ ಹೊಂದಿದ ವಿಕಿರಣಗಳು ಭೂಮಿಯ ಮೇಲಿನ ಅನೇಕ ವಸ್ತುಗಳಿಂದ ಹೀರಲ್ಪಟ್ಟವು. ಈ ರೀತಿ ವಿಕಿರಣಗಳನ್ನು ಹೀರಿಕೊಂಡ ವಸ್ತುಗಳು ಕ್ರಮೇಣ ತಾವೇ ವಿಕಿರಣಗಳನ್ನು ಸೂಸಲಾರಂಭಿಸಿದವು. ಪರಮಾಣು ಬಾಂಬ್ ದಾಳಿಯ ನಂತರ ಸಾವು ನೋವಿಗೀಡಾದ ಜನರನ್ನು ನೋಡಲು ಬಂದವರಿಗೆ ಈ ಪ್ರೇರಿತ ವಿಕಿರಣ ಅಪಾರ ಹಾನಿಯನ್ನುಂಟು ಮಾಡಿತು. ಇದರಿಂದಲೂ ಅನೇಕ ಜನ ವಿಕಿರಣಗಳ ದುಷ್ಪರಿಣಾಮಗಳಿಗೆ ಗುರಿಯಾದರು.

ವಿಕಿರಣಕೆ ಗುರಿಯಾಗಿ ಸಾವನ್ನಪ್ಪದೆ ಬದುಕುಳಿವ ಜನ ಅನೇಕ ತೊಂದರೆಗಳಿಗೆ ಗುರಿಯಾದರು. ಈ ವಿಕಿರಣಗಳಿಂದ ಆದ ಸಣ್ಣ ಪುಟ್ಟ-ಗಾಯಗಳು ವಾಸಿಯಾಗಲು ಬಹಳ ದೀರ್ಘ ಕಾಲ ಹಿಡಿಯಿತು. ವಿಕಿರಣಕ್ಕೆ ಗುರಿಯಾದ ಬಹು ಪಾಲು ಜನರು ಕ್ಯಾನ್ಸರ್ ವ್ಯಾಧಿಗೆ ಗುರಿಯಾದರು. ವಿಕಿರಣವನ್ನು ಪಡೆದು ಬದುಕುಳಿದ ಜನರನ್ನು 'ಹಿಬಾಕುಷ' ರೆಂದು ಕರೆಯುತ್ತಾರೆ. ಈ ಹಿಬಾಕುಷರ ಜೀವನ ಅತ್ಯಂತ ದುರ್ಭರವಾಗಿತ್ತು. ಅವರನ್ನು ಜಪಾನಿನ ಜನ ಬಹಿಷ್ಕೃತ ವ್ಯಕ್ತಿಗಳಂತೆ, ಕುಷ್ಠರೋಗಿಗಳಂತೆ ಕಂಡಿತು. ವಿಕಿರಣದಿಂದುಂಟಾದ ಜೈವಿಕ ದುಷ್ಪರಿಣಾಮದಿಂದ ಹಿಬಾಕುಷರಿಗೆ ಜನಿಸಿದ ಮಕ್ಕಳು ಅಕರಾಳ ವಿಕರಾಳ ರೂಪವನ್ನು ಪಡೆದಿದ್ದವು. ಮೂಗು, ಕಣ್ಣು ಕಿವಿ ಮುಂತಾದ ಅವಯವಗಳಿಲ್ಲದ ಮಾಂಸದ ಮುದ್ದೆಗಳಾದ ಮಕ್ಕಳನ್ನು ಅವರು ಹಡೆದರು. ಚೆಂಡಿನ ಗಾತ್ರದ ತಲೆಯುಳ್ಳ ಅನೇಕ ಮಕ್ಕಳು ಹುಟ್ಟಿದವು. ಈ ಜೈವಿಕ ದುಷ್ಪರಿಣಾಮ ಹಲವಾರು ತಲೆ ಮಾರುಗಳಿಗೆ ವರ್ಗಾವಣೆಯಾಗಿ ಇಂದಿಗೂ ಅಲ್ಲಲ್ಲಿ ಇಂತಹ ಮಕ್ಕಳ ಜನನವನ್ನು ಕಾಣಬಹುದಾಗಿದೆ. ಒಂದು ಉದಾರ ಅಂದಾಜಿನಂತೆ ಇಂದು ಜಪಾನಿನಲ್ಲಿ ಸುಮಾರು3,60,000 ಜನರಿಗೆ ಹಿಬಾಕುಷ ಪ್ರಶಸ್ತಿ ಪತ್ರ ನೀಡಲಾಗಿದೆ. ಇವರು ಜಪಾನಿನಲ್ಲಿ ಇಂದೂ ಪ್ರತ್ಯೇಕ ಜೀವನವನ್ನು ನಡೆಸಬೇಕಾಗಿದೆ. ತಮಗೆ ವಿಕಾರ ಮಕ್ಕಳು ಹುಟ್ಟಬಹುದೆಂಬ ಭೀತಿಯಿಂದ ಅನೇಕರು ಹಿಬಾಕುಷರನ್ನು ಮದುವೆಯಾಗಲು ನಿರಾಕರಿಸುತ್ತಾರೆ.

ಈ ಪರಮಾಣು ಬಾಂಬಿನಿಂದಾದ ದುಷ್ಪರಿಣಾಮಗಳು ಈಬಾಂಬುಗಳನ್ನು ಹಾಕಿದ ಪೈಲಟ್‌ಗಳನ್ನು ದಿಗ್ಭ್ರಮೆಗೊಳಿಸಿತೇ. ಅವರಲ್ಲಿ ಒಬ್ಬನಾದ ಚಪ್ಪರ್ ತಾನು ಎಸಗಿದ ಘೋರ ಕೃತ್ಯಕ್ಕೆ ಪ್ರಾಯಶ್ಚಿತ್ತವಾಗಿ ಪ್ರಪಂಚದಾದ್ಯಂತ ಚಪ್ಪರ್ ಹೋಂ, ಹೆಸರಿನಲ್ಲಿಅನಾಥಲಯಗಳನ್ನು ಸ್ಥಾಪಿಸಿ ಅವರ ಸೇವೆಯಲ್ಲಿ ತನ್ನ ಜೀವಿತದ ಉಳಿದ ಅವಧಿಯನ್ನು ಕಳೆದ, ಮತ್ತೊಬ್ಬ ಪೈಲಟ್ ರಾಬರ್ಟ್ ಲೂಯಿಸ್ ಪರಮಾಣು ಬಾಂಬ್ ವಿರೋಧಿ ಹೋರಾಟದಲ್ಲಿ ಸಕ್ರೀಯವಾಗಿ ಪಾಲ್ಗೊಂಡು ತನ್ನ ಕೊನೆಯುಸಿರಿನವರೆಗೂ ಪ್ರಪಂಚದಾದ್ಯಂತ ಸಂಚರಿಸಿ ಅಣ್ವಸ್ತ್ರನಾಶಕ್ಕಾಗಿಜನಜಾಗೃತಿ ಮೂಡಿಸಲು ಹೋರಾಡಿದ.

ಈ ಬಾಂಬ್‌ಗಳನ್ನು ಒಗೆದ ಪೈಲಟ್‌ಗಳಿಗೆ ತಮ್ಮ ಕೈಯಲ್ಲಿ ಮಾಡಿಸಲ್ಪಟ್ಟ ಮನುಕುಲ ದ್ರೋಹದ ಕೆಲಸ ಅವರ ಜೀವನ ದುದ್ದಕ್ಕೂ ಕಾಡಿತು. ಅದರಲ್ಲೊಬ್ಬ ಅಣುಯುದ್ಧ ವಿರೋಧಿ ಚಳುವಳಿಯ ನೇತಾರನಾಗಿ ಜನ ಜಾಗೃತಿ ಮಾಡಲು ಜೀವ ಸವೆಸಿದರೆ ಮತ್ತೊಬ್ಬ ಪಾಪ ಪ್ರಜ್ಞೆಯಿಂದ ನರಳುತ್ತಾ ಅನಾಥಶ್ರಮಗಳನ್ನು ಕಟ್ಟಿಸುತ್ತಾ ಸಾಗಿದ.

42 ವರ್ಷಗಳ ಹಿಂದೆ ಅಮೆರಿಕನ್ ಸಾಮ್ರಾಜ್ಯಶಾಹಿಗಳ 2 ಪುಟ್ಟಬಾಂಬ್‌ಗಳಿಂದ ಇಂತಹಅಪಾರಹಾನಿಯಾದರು ಅದನ್ನು ಸಂಪೂರ್ಣವಾಗಿ ಕಡೆಗಣಿಸಿ ಇಂದೂ ಸಹ ತನ್ನ ಯುದ್ಧ ಕೋರ ನೀತಿಯನ್ನು ಮತ್ತಷ್ಟು ತೀವ್ರಗೊಳಿಸಿದೆ. ಮೊದಲುಹೊಡೆಯುವ ಸಾಮರ್ಥ್ಯ ಪಡೆಯುವ ಹಂಬಲನಲ್ಲಿ ಅಮೇರಿಕಾ ಇಂದು ಶಸ್ತ್ರಾಸ್ತ್ರ ಪೈಪೋಟಿಯನ್ನು ಬಾಹ್ಯಾಕಾಶಕ್ಕೆ ವಿಸ್ತರಿಸುತ್ತಿದೆ. "ತಾರಾ ಸಮರ"ವೆಂದು ಕುಖ್ಯಾತವಾಗಿರುವ ಯೋಜನೆಯನ್ನು ಪ್ರಪಂಚದಾದ್ಯಂತ ಜನ ವಿರೋಧಿಸುತ್ತಿದ್ದರು. ಅದನ್ನು ಮುಂದುವರಿಸುತ್ತಿದೆ. ಈ ತಾರಾ ಸಮರಕ್ಕೆ ಟ್ರಲಿಯನ್ ಗಟ್ಟಲೆ ಹಣವನ್ನು ಸುರಿಯಲಾಗುತ್ತಿದೆ. ಮಾನವಕಲ್ಯಾಣಕ್ಕೆ ವಿನಿಯೋಗವಾಗಬೇಕಿದ್ದ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ನಮಗೆ ವಾಸಿಸಲು ಇರುವ ಏಕೈಕ ಗ್ರಹವಾದ ಭೂಮಿಯನ್ನು ಹಲವಾರು ಪಟ್ಟು ನಾಶಮಾಡಲು ದುರುಪಯೋಗ ಪಡಿಸಿಕೊಳ್ಳಲಾಗಿದೆ. ಇಡೀ ಮನುಷ್ಯ ಕುಲವನ್ನೇವಿನಾಶದ ಅಂಚಿಗೆ ತಂದೊಡ್ಡಿರುವ ಈ 'ರಾಕ್ಷಸರಿಂದ ಇಂದು ಈ ನಮ್ಮ ಭೂಮಿಯನ್ನು ರಕ್ಷಿಸಲು ಹೋರಾಡ ಬೇಕಾಗಿದೆ.

– ಸಿರಾಜ್

ಚೆಗೆವಾರ : ವಿಮೋಚನಾ ಚಳುವಳಿಗಳಿಗೆ ಸ್ಫೂರ್ತಿ

ಸಿ.ಪಿ.ಐ. (ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಇ. ಎಂ. ಎಸ್. ರವರು ಜಗತ್ತಿನೆಲ್ಲೆಡೆ ಉಕ್ಕಿ ಬರುತ್ತಿರುವ ವಿಮೋಚನಾ ಚಳುವಳಿಗಳಿಗೆ ಕ್ಯೂಬದ ಕ್ರಾಂತಿಕಾರಿ 'ಚೆ' ರವರ ಕ್ರಾಂತಿಕಾರಿ ಜೀವನ ಸ್ಫೂರ್ತಿಯಾಗಿದೆ ಎಂದು ಘೋಷಿಸಿದರು.

ಲ್ಯಾಟಿನ್ ಅಮೇರಿಕಾ ದೇಶಗಳಲ್ಲಿ ನಡೆದ ಎಲ್ಲಾ ವಿಮೋಚನಾ ಚಳುವಳಿಯಲ್ಲಿಯೂ 'ಚೆ' ಯವರು ಸಜೀವ ಸಂಬಂಧವನ್ನಿಟ್ಟು ಕೊಂಡಿದ್ದರು. ಕ್ಯೂಬನ್ ಕ್ರಾಂತಿಯ 37ನೇ ವರ್ಷ ಹಾಗೂ 'ಚೆ' ರವರ ನಿಧನದ 20ವರ್ಷವನ್ನು ಆಚರಿಸಲು ಡಿ.ವೈ ಎಫ್.ಐ. ಏರ್ಪಡಿಸಿದ ಸಭೆಯಲ್ಲಿ ಕಾಂ.ಇ.ಎಂ.ಎಸ್. ಮಾತನಾಡುತ್ತಿದ್ದರು. ಚೆಗೆವಾರ ಹುಟ್ಟಿದ ಸ್ಥಳವನ್ನು ನಾನು ನೋಡಿದ್ದೇನೆ. ಆ ಸಂದರ್ಶನದಲ್ಲಿ ನನ್ನಲ್ಲಿ ಉಂಟಾದ ಭಾವನೆಗಳು ಎಂದೆಂದಿಗೂ ಉಳಿಯುವಂತಹವು.

ಭಾರತದಲ್ಲಿ ಕ್ಯೂಬಾದ ರಾಯಬಾರಿಯಾಗಿರುವ ಜುವಾನ್ ಆಲ್‌ದಮಾರವರೂ ಈ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಕ್ಯೂಬನ್ ಕ್ರಾಂತಿ ಕೇವಲ ಒಂದು ದೇಶದ ಜೀವನದ ಪ್ರಶ್ನೆಗೆ ಸೀಮಿತವಾಗಿಲ್ಲ. ಇತಿಹಾಸದ ಚಲನೆಗೆ ಅನುಗುಣವಾದ ದಾರಿಯಲ್ಲಿ ನಡೆದ ಅಂತರ ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ಕ್ರಾಂತಿ ಅದು ಎಂದು ಅವರು ಹೇಳಿದರು.

ಈ ಸಭೆಯಲ್ಲಿ ಡಿ.ವೈ ಎಫ್.ಐ. ಪ್ರಧಾನ ಕಾರ್ಯದರ್ಶಿ ಹನ್ನನ್ ಮುಲ್ಲಾ ಉಪಸ್ಥಿತರಿದ್ದರು.

REG No. BGW-148 MAG (2) PRB DECR 319/-78-79

ರಾಷ್ಟ್ರದ ಆರ್ಥಿಕ ಶಿಥಿಲವಾಗುತ್ತಿದೆ

(1ನೇ ಪುಟದಿಂದ)

ಏನು ವಿಪರ್ಯಾಸ ! ಒಂದೆಡೆ ಕೇಂದ್ರ ಸರ್ಕಾರವು ಶ್ರೀಮಾನ್ ರಾಜೀವರ ನೇತೃತ್ವದಲ್ಲಿ, ಸಾರ್ವಜನಿಕ ಕ್ಷೇತ್ರವನ್ನು ಕಡೆಗಣಿಸಿ ಸರ್ವ ರೀತಿಯಲ್ಲಿ 'ಖಾಸಗಿ ಬಂಡವಾಳ ಕ್ಷೇತ್ರಕ್ಕೆ' ಪ್ರೋತ್ಸಾಹ ಕೊಡುತ್ತಿರುವಾಗ, ದೇಶದ ಆರ್ಥಿಕ ಸ್ವಾಯುತ್ತತೆಗೆ ಈ ರೀತಿ ಐ. ಎಂ. ಎಫ್. ಮತ್ತು ಜಾಗತಿಕ ಬ್ಯಾಂಕ್ ಆದೇಶಕ್ಕನುಸಾರವಾಗಿ ಖಾಸಗೀ ಬಂಡವಾಳಕ್ಕೆ ಪ್ರೋತ್ಸಾಹ ಕೊಡುವುದು ಸರಿಯಲ್ಲವೆಂದು ಎಲ್ಲಾ ಪುರೋಗಾಮಿಗಳು ಎಚ್ಚರಿಕೆ ಕೊಡುತ್ತಿರುವಾಗ, ಖಾಸಗಿ ಬಂಡವಾಳಗಾರರು ಮಾತ್ರ ಇನ್ನೂ ತಮ್ಮ ಬಂಡವಾಳವನ್ನು ಕೈಗಾರಿಕೆಯಲ್ಲಿ ಹೂಡಲು ಹಿಂಜರಿಯುತ್ತಿದ್ದಾರೆ ಎಂಬುದಂತೂ ಸತ್ಯ. ಅವರಲ್ಲಿ ಹೆಚ್ಚಿನವರು ಇನ್ನೂ 'ವ್ಯಾಪಾರಿ ಬಂಡವಾಳಶಾಹೀ' ಮನೋಭಾವದ ಚಿಪ್ಪಿನಿಂದ ಹೊರಗಡೆ ಬಂದಿರುವುದಿಲ್ಲ.

ಆರ್ಥಿಕ ಹಿನ್ನಡೆ (Recession) ಸಾರ್ವತ್ರಿಕವಾಗಿರುವಾಗ ಅಂತಹ ಧೈರ್ಯವನ್ನು ಈ ಖಾಸಗೀ ಬಂಡವಾಳಗಾರರು ಎಲ್ಲಿಂದ ತಂದು ಕೊಂಡಾರು ?

> ಹಲವರನ್ನು ಸ್ವಲ್ಪಕಾಲ ಮೋಸ ಮಾಡಬಹುದು; ಕೆಲವರನ್ನು ಹೆಚ್ಚುಕಾಲ ಮೋಸ ಮಾಡಬಹುದು; ಆದರೆ ಎಲ್ಲರನ್ನು ಎಲ್ಲಕಾಲ ಮೋಸ ಮಾಡಲು ಸಾಧ್ಯವಿಲ್ಲ.

ಇನ್ನು ಭಾರತದ ಬಂಡವಾಳಗಾರರು ಜಾಗತಿಕ ಬಂಡವಾಳಗಾರರ ಬಹು ರಾಷ್ಟ್ರೀಯ ಕಂಪನಿಗಳ ಜೊತೆ ಪೈಪೋಟಿ ಮಾಡಿ ತಮ್ಮ ಸರಕುಗಳ ವ್ಯತ್ಯಾಸವನ್ನು ಬಹಳಷ್ಟು ಕಡಿಮೆ ಮಾಡಿ ವಿದೇಶಗಳ ಮಾರ್ಕೆಟುಗಳಲ್ಲಿ ಸ್ಪರ್ಧಿಸುವಂತಾಗಬೇಕೆಂದು ಶ್ರೀಮಾನ್ ರಾಜೀವ್‌ರವರು 'ಖಾಸಗಿ ಬಂಡವಾಳಗಾರರಿಗೆ ಕೈಗಾರಿಕಾ ಲೈಸನ್ಸ್‌ಗಳನ್ನು ಕೊಟ್ಟದ್ದೇ ಕೊಟ್ಟದ್ದು'. ಪ್ರಯೋಜನ ? ಪರಿಣಾಮ ?

ಸಾರ್ವಜನಿಕರಿಂದ 'ಬಂಡವಾಳ'ವನ್ನು ಎತ್ತಿ, ಸಾರ್ವಜನಿಕ ಹಣಕಾಸು ಸಂಸ್ಥೆಗಳಿಂದ 'ಬಂಡವಾಳವನ್ನು' ಸಾಲ ತೆಗೆದುಕೊಂಡು ಅಥವಾ ಅವುಗಳ ಜತೆ ಕೂಡಿ ಜಂಟಿಯಾಗಿ ಬಂಡವಾಳ ಹೂಡಿ (ದೊಡ್ಡ ಪ್ರಮಾಣದ ಬಂಡವಾಳ ಸಾರ್ವಜನಿಕ ಸಂಸ್ಥೆಗಳದಾಗಿದ್ದು ಅಲ್ಪಾಂಶ ಬಂಡವಾಳ ಖಾಸಗಿಯವರದ್ದು) ಕೈಗಾರಿಕಾ ಉತ್ಪನ್ನದ ತಳಹದಿಯನ್ನು ವೃದ್ಧಿಸಿದ್ದೇ ವೃದ್ಧಿಸಿದ್ದು.

ಈಗ ಮಾರ್ಕೆಟು ಇಲ್ಲದೆ ಈ ಕೈಗಾರಿಕಾ ತಳಹದಿ ವಿಸ್ತಾರವು 'ಬಿಕೊ' ಎಂದು ಕೂಗುತ್ತಿದೆ.

ಒಟ್ಟಿನಲ್ಲಿ ಬಡತನ ಹೆಚ್ಚುತ್ತಿದೆ. ನಿರುದ್ಯೋಗದ ಪ್ರಮಾಣ ಭೂತಾಕಾರವಾಗಿ ಬೆಳೆಯುತ್ತಿದೆ, ಪರಿಹಾರ ಕಾಣುವುದಿಲ್ಲ.

ಈ ಸಂದರ್ಭದಲ್ಲಿ ಪಾರ್ಲಿಮೆಂಟಿನಲ್ಲಿ ಅನಧಿಕೃತ ಠರಾವು ಒಂದರ ಚರ್ಚೆಯ ವೇಳೆ ಲೇಬರ್ ಮಂತ್ರಿ ಶ್ರೀಮಾನ್ ಸಂಗ್ಮಾನವರು "ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯೆ ಕೊಡುವುದರ ಬದಲು, ಆ ಹಣವನ್ನು ಬಂಡವಾಳವಾಗಿ ಹೂಡುವ ಮೂಲಕ ನಾವು ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಲು ಪ್ರಯತ್ನಿಸುತ್ತೇವೆ" ಎಂದು ಹೇಳಿದ ಮಾತು ನಿಜವಾಗಿಯೂ ಅರ್ಥ ಗರ್ಭಿತವಾಗಿದೆ. ಹಲವರನ್ನು ಸ್ವಲ್ಪ ಕಾಲ ಮೋಸ ಮಾಡಬಹುದು; ಕೆಲವರನ್ನು ಹೆಚ್ಚುಕಾಲ ಮೋಸ ಮಾಡಬಹುದು; ಆದರೆ ಎಲ್ಲರನ್ನು ಎಲ್ಲಾ ಕಾಲ ಮೋಸ ಮಾಡಲು ಸಾಧ್ಯವಿಲ್ಲ.

ರಾಜ್ಯದಾದ್ಯಂತ ಯಶಸ್ವಿ ಪಿಕೆಟಿಂಗ್

(1ನೇ ಪುಟದಿಂದ)

ಬೆಂಗಳೂರು

ಸಿ.ಐ.ಟಿ.ಯು. ಎ.ಐ.ಟಿ.ಯು.ಸಿ. ಎಚ್.ಎಂ.ಎಸ್. ಬ್ಯಾಂಕ್, ಎಲ್.ಐ.ಸಿ. ಮೈಕೋ ಕಾರ್ಮಿಕರ ಸಂಘಗಳು, ಪ್ರಾಂತ ರೈತ ಸಂಘ, ಎಸ್.ಎಫ್.ಐ. ಹಾಗೂ ಡಿ.ವೈ.ಎಫ್.ಐ. ಸಂಘಟನೆಗಳ ಎರಡು ಸಹಸ್ರಮಂದಿ ಚಿಕ್ಕಲಾಲ್‌ಬಾಗ್‌ನಿಂದ ಮೆರವಣಿಗೆ ಹೊರಟ ರಾಜ ಭವನ್ ತಲುಪಿ ಎರಡು ಗಂಟೆಗ ಳಕಾಲಧರಣಿ ಸತ್ಯಾಗ್ರಹ ನಡೆಸಿದರು. ಈ ಧರಣಿಯಲ್ಲಿಯೂ ಬಿ.ಎಂ.ಎಸ್. ಭಾಗವಹಿಸಿರಲಿಲ್ಲ.

ಧರಣಿಯನ್ನುದ್ದೇಶಿಸಿ, ಸಿ.ಐ ಟಿ.ಯು ರಾಜ್ಯ ಅಧ್ಯಕ್ಷ ಹಾಗೂ ಅಖಿಲ ಭಾರತ ಉಪಾಧ್ಯಕ್ಷರಾದ ಕಾ. ಎಸ್ ಸೂರ್ಯನಾರಾಯಣರಾವ್, ಎ.ಐ.ಟಿ.ಯು.ಸಿ. ಮಹಾದೇವನ್, ಎಚ್.ಎಂ.ಸ್.ನ ಕಾಂ.ದೇವ್‌ರವರು ಮಾತನಾಡಿದರು.

ದೊಡ್ಡಬಳ್ಳಾಪುರ

ಸಿ.ಐ.ಟಿ.ಯು. ಕಾರ್ಯಕರ್ತರು 'ಉದ್ಯಾವನ್ ಎಕ್ಸ್‌ಪ್ರೆಸ್' ರೈಲನ್ನು ತಡೆದು ನಿಲ್ಲಿಸಿದ್ದರು. ಈ ರೈಲು ತಡೆ ಕಾರ್ಯಕ್ರಮ ದೊಡ್ಡ ಬಳ್ಳಾಪುರದಲ್ಲಿ ನಡೆದದ್ದು ಪೋಲೀಸರಿಗೊಂದು ಧಿಡೀರ್ ಆಶ್ಚರ್ಯ. ಪೋಲೀಸರು ಹೆಚ್ಚಿನ ಸಂಖ್ಯೆಯಲ್ಲಿದ್ದ ಕಾರ್ಯಕರ್ತರನ್ನು ಬಂಧಿಸದೇ ರೈಲ್ವೆ ಅಧಿಕಾರಿಯೊಡನೆ ಮಾತುಕತೆ ಮಾಡಿ ವಿನಂತಿಸಿದ ನಂತರ ರೈಲನ್ನು ಬಿಡಲಾಯಿತು. ಎ.ವಿ. ರಮೇಶ, ಕೃಷ್ಣಮೂರ್ತಿ, ರಾಮಭದ್ರಯ್ಯ, ರಾಮಾಂಜನೇಯ ನೇತೃತ್ವವಹಿಸಿದ್ದರು. ●

(ವಿವಿಧ ಜಿಲ್ಲೆಗಳ ಸುದ್ದಿ ಮುಂದಿನ ವಾರ)

ವಿರೋಧ ಪಕ್ಷಗಳ ನಿರಾಕರಣೆ

(1ನೇ ಪುಟದಿಂದ)

ಇಂತಹ ಪರಿಸ್ಥಿತಿಯಲ್ಲಿ ಯಾವುದೇ ವಿಚಾರಣೆ ಕೇವಲ ಒಂದು ನಿರರ್ಥಕ ಕಸರತ್ತಾಗಿ, ಅಪಹಾಸ್ಯದ ಮಟ್ಟಕ್ಕಿಳಿಯುತ್ತದೆ. ಉಚ್ಚಸ್ಥಾನಗಳಲ್ಲಿನ ಭ್ರಷ್ಟಾಚಾರದ ಬಗ್ಗೆ ತೀವ್ರ ಆತಂಕಗೊಂಡಿರುವ ಜನತೆಯ ಕಣ್ಣಲ್ಲಿ ಇಂತಹ ತನಿಖಾ ಸಮಿತಿ ನಂಬಿಕೆಗೆ ಅನರ್ಹವಾಗುತ್ತಿದೆ. ಆದ್ದರಿಂದ ನಾವು ಈ ಸಮಿತಿಯನ್ನು ಬಹಿಷ್ಕರಿಸುತ್ತಿರುವುದಾಗಿ ಸಿ.ಪಿ.ಐ(ಎಂ) ಸೇರಿದಂತೆ 18 ವಿರೋಧಪಕ್ಷಗಳು ಆಗಸ್ಟ 6 ರಂದು ನೀಡಿದ ಪ್ರತಿಕಾ ಹೇಳಿಕೆಯಲ್ಲಿ ತಿಳಿಸಿದೆ.

ಇದಕ್ಕೆ ಮೊದಲು ಸರ್ಕಾರೀ ಸೂಚನೆಯ ಮೇಲೆ ಲೋಕಸಭೆಯಲ್ಲಿ ನಡೆದ ಮೂರು ದಿನಗಳ ಚರ್ಚೆಯಲ್ಲಿ ಮಾತನಾಡುತ್ತಾ, ಆಗಸ್ಟ 3 ರಂದು ಸಿ.ಪಿ.ಐ.(ಎಂ)ನ ಕಾಂ॥ಸೋಮನಾಥ್ ಚಟರ್ಜಿಯವರು ಸರ್ಕಾರ ಬಯಸುವ ಸಮಿತಿ ಹಗರಣವನ್ನು ಸಂಪೂರ್ಣ ಮುಚ್ಚಿ ಹಾಕುವ ಒಂದು ದೊಡ್ಡ ಮೋಸ ಎಂದು ವರ್ಣಿಸಿ ಸತ್ಯವನ್ನು ಮರೆಮಾಚುವ ಕೆಲಸದಲ್ಲಿ ಶಾಮೀಲಾಗುವ ಅಥವಾ ಇಂತಹದೊಂದು ರಾಜಕೀಯದ ದಗಲಾಬಾಜಿತನದಲ್ಲಿಪಾಲ್ಗೊಳ್ಳಲು ವಿರೋಧಪಕ್ಷಗಳು ಖಂಡಿತಾ ಸಿದ್ಧವಿಲ್ಲ ಎಂದು ಘೋಷಿಸಿದರು. ಮುಂದುವರೆದು ಅವರು ಬೋಫೋರ್ಸ್ ಹಾಗೂ ಸಬ್‌ಮೆರಿನ್ ಹಗರಣಗಳು ಅಗಾಧ ಭ್ರಷ್ಟಾಚಾರದ ಒಂದು ಸಣ್ಣ ಭಾಗವಷ್ಟೇ ಎಂದರು.

ತೆಲಗುದೇಶಂನ ಮಾಧವರೆಡ್ಡಿಯವರು ಜಗತ್ತಿನಾದ್ಯಂತ ಕುಖ್ಯಾತವಾಗಿರುವ ಬೋಫೋರ್ ಕಂಪೆನಿಯ ವಿರುದ್ಧ ಕ್ರಮಕೈಗೊಳ್ಳಲು ಸ್ವೀಡನ್ ಸರ್ಕಾರವನ್ನು ಕೇಳುವಲ್ಲಿ, ಬೋಫೋರ್‌ನ ಭಾರತೀಯ ಏಜೆಂಟ್‌ವಿನಚಡ್ಡಾರವರ ಮೇಲೆ ಕಾನೂನು ಕ್ರಮಕೈಗೊಳ್ಳುವಲ್ಲಿ ಸರ್ಕಾರದವಿಫಲತೆಯನ್ನು ಕಟುವಾಗಿ ಟೀಕಿಸಿದರೆ ಸಿ.ಪಿ.ಐ.ನ ಇಂದ್ರಜಿತ್‌ಗುಪ್ತಾ ವಿರೋಧಪಕ್ಷಗಳ ತಿದ್ದುಪಡಿಗಳಿಗೆ ಒಪ್ಪುವುದು ಸರ್ಕಾರದ ಹಿತ ದೃಷ್ಟಿಯಿಂದಲೇ ಒಳ್ಳೆಯದು, ಇಲ್ಲವಾದರೆ ಉದ್ದೇಶಿತ ಸಮಿತಿ ಕೇವಲ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಾಗುತ್ತದೆ ಎಂದರು. ಕಾಂಗ್ರೆಸ್(ಎಸ್)ನ ಉನ್ನಿಕೃಷ್ಣನ್ 1980ರಿಂದಲೇ ಈ ರೀತಿಯ ದಳ್ಳಾಳಿಗಳು ಇದ್ದ ಪುರಾವೆಗಳಿವೆಯೆಂದರು.

ಕಾಂಗ್ರೆಸ್(ಐ) ಸದಸ್ಯರು ವಿರೋಧ ಪಕ್ಷಗಳದ್ದು ಸಂಕುಚಿತ ದೃಷ್ಟಿ, ಬೇಜವಾಬ್ದಾರಿ ಬೇಡಿಕೆಗಳು ಎಂದು ಹೇಳಿದರೂ ಒಬ್ಬರು ಕಾಂಗ್ರೆಸ್(ಐ) ಸದಸ್ಯರು ಸರ್ಕಾರ ಹಾಗೂ ವಿರೋಧ ಪಕ್ಷಗಳು ಜತೆಗೆ ಕೂತು ಒಂದು ನಿರ್ಧಾರಕ್ಕೆ ಬರಬೇಕೆಂದು ಆಶಿಸಿದರು. ಎ.ಐ.ಡಿ.ಎಂ.ಕೆ.ಸದಸ್ಯರು ಕೂಡ ಉದ್ದೇಶಿತ ಸಮಿತಿಗೆ ಸಾಕಷ್ಟು ಅಧಿಕಾರಗಳಿರಬೇಕೆಂದು ಅಭಿಪ್ರಾಯ ಪಟ್ಟರು ! ಆದರೆ ಕಾಂಗ್ರೆಸ್(ಐ) ಸರ್ಕಾರದ ನಿಜ ಉದ್ದೇಶ ಬೇರೆಯೇ ಎಂಬುದು ಈಗ ಸ್ಪಷ್ಟವಾಗಿದೆ.

ರಾಜ್ಯ ಸಭೆಯಲ್ಲಿ ಬೊಫೋರ್ಸ್ ಹಗರಣದ ಚರ್ಚೆಯನ್ನು ತೆಗೆದುಕೊಳ್ಳದೆ ಸರ್ಕಾರ ತಪ್ಪಿಸಿಕೊಳ್ಳುವ ನಿಲುವು ತಗೊಂಡುದನ್ನು ಪ್ರತಿಭಟಿಸಿ ಕಳೆದ ವಾರ ವಿರೋಧ ಪಕ್ಷಗಳ ಸದಸ್ಯರು ಯಾವ ಸಭೆಯಲ್ಲೂ ಭಾಗವಹಿಸಲಿಲ್ಲ. ಬೊಫೋರ್ಸ್ ಹಗರಣವನ್ನು ಚರ್ಚೆಗೆ ಪಟ್ಟಿಮಾಡಿದ ಮೇಲೇನೇ ತಾವು ಹಾಜರಾಗುವುದೆಂದು ಅವರು ನಿರ್ಧರಿಸಿದ್ದಾರೆ. ಈ ಪ್ರತಿಭಟನೆಯ ಫಲವಾಗಿ ಮುಂದಿನವಾರ ರಾಜ್ಯ ಸಭೆಯಲ್ಲಿ ಎರಡು ದಿನ ಬೊಫೋರ್ಸ್ ಹಗರಣದ ಬಗ್ಗೆ ಚರ್ಚೆ ನಡೆಯುವುದೆಂದು ಈಗ ತಿಳಿದು ಬಂದಿದೆ. ○

ರೈತ ಸಂಘದ ಹೊಸ ಘಟಕ

ಜುಲೈ21ರಂದು ಧಾರವಾಡದ ಸತ್ತೂರ ಗ್ರಾಮದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಘಟಕವನ್ನು ಸ್ಥಾಪಿಸಲಾಯ್ತು. ಊರಿನ ಹಿರಿಯರಾದ ಮಲ್ಲಪ್ಪ ಅಂಬಳದ ಅವರು ಉದ್ಘಾಟನೆ ಮಾಡಿದರು. ಪ್ರಾಂತ ರೈತ ಸಂಘದ ರಾಜ್ಯಪ್ರಧಾನಕಾರ್ಯದರ್ಶಿಕಾ॥ ಪಿ.ರಾಮಚಂದ್ರರಾವ್‌ಅವರು ಮುಖ್ಯ ಅತಿಥಿಗಳಾಗಿದ್ದರು. ರಾತ್ರಿ10ಗಂಟೆಯ ವರೆಗೆ ನಡೆದ ಸಭೆಯಲ್ಲಿ ಇಂಗಳಹಳ್ಳಿಯವರು ರೈತ ಸಂಘದ ಅವಶ್ಯಕತೆ ಬಗ್ಗೆ ಮಾತನಾಡಿದರು. ಚನ್ನಬಸಪ್ಪ ಅವರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಪಿ. ರಾಮಚಂದ್ರ ರಾವ್ ಅವರು ರೈತ ಸಂಘದ ಇತಿಹಾಸ ನಡೆಸಿದ ಹೋರಾಟಗಳ ಬಗ್ಗೆ ವಿವರಿಸಿದರು. ○

ಈ ವಾರ....

★ ನಮ್ಮಲ್ಲಿ ರಾಜಕೀಯದ ಮೇಲೆ ಹಣದ ಪ್ರಭಾವ ಹೆಚ್ಚಾದಾಗ ಪಕ್ಷದ ಅಂತರಿಕ ಪ್ರಜಾಸತ್ತೆ ದುರ್ಬಲಗೊಳ್ಳುತ್ತೆ. ಪಕ್ಷದಲ್ಲಿ ಪ್ರಜಾಸತ್ತೆ ನಾಶವಾದಾಗ ರಾಷ್ಟ್ರದಲ್ಲಿ ಸರ್ವಾಧಿಕಾರ ಮೆರೆದಾಡುತ್ತದೆ. ಈಗ ಈ ಭ್ರಷ್ಟಾಚಾರವನ್ನು ಬರೀ ವ್ಯಕ್ತಿಗತ ಅಥವಾ ಪಕ್ಷಮಟ್ಟದ ಲಂಚಗುಳಿತನ ಎಂಬ ಸೀಮಿತ್ಯದೃಷ್ಟಿಯಿಂದ ನೋಡಬಾರದು.

—ವಿ.ಪಿ. ಸಿಂಗ್ ಬೆಂಗಳೂರು ಭಾಷಣದಲ್ಲಿ.

★ ಸ್ವರಾಜ್ಯ ಜನ್ಮಸಿದ್ಧ ಹಕ್ಕು ಎಂಬಂತೆ ಭ್ರಷ್ಟಾಚಾರ ಮುಕ್ತ ಸರ್ಕಾರ ನಮ್ಮ ಹಕ್ಕು

–ರಾಮಕೃಷ್ಣ ಹೆಗಡೆ ವಿ.ಪಿ.ಸಿಂಗ್ ಬಹಿರಂಗ ಸಭೆಯಲ್ಲಿ

★ ಪ್ರಶ್ನೆ : ನೀವು ಹೇಳುವುದೆಂದರೆ ಪ್ರಧಾನ ಮಂತ್ರಿಸಂವಿಧಾನವನ್ನು ಉಲ್ಲಂಘಿಸದಿದ್ದರೂ ಅವರ ವಿರುದ್ಧ ಕ್ರಮ ಅಸಾಧ್ಯವೇ ?

ಉತ್ತರ : ಹೌದು. ಪ್ರಧಾನಿಯ ವಿರುದ್ಧ ಏನೂ ಮಾಡಲು ಸಾಧ್ಯವಿಲ್ಲ. ಸಂವಿಧಾನದಲ್ಲಿ ಅದರ ಪ್ರಸ್ತಾವಿಲ್ಲ.

—ಆರ್.ವೆಂಕಟರಾಮನ್ 'ಇಂಡಿಯಾ ಟುಡೇ' ಸಂದರ್ಶನದಲ್ಲಿ.

★ ತಮಿಳು ಉಗ್ರಗಾಮಿಗಳು ತಮ್ಮ ಶಸ್ತ್ರತ್ಯಾಗ ಒಪ್ಪಂದದಂತೆ ಶಸ್ತ್ರಾಸ್ತ್ರಗಳನ್ನು ಒಪ್ಪಿಸಲು ಆರಂಭಿಸಿ, ಶ್ರೀಲಂಕಾದಲ್ಲಿ ನಾಲ್ಕು ವರ್ಷಗಳ ಜನಾಂಗ ಹೋರಾಟವನ್ನು ಔಪಚಾರಿಕವಾಗಿ ಅಂತ್ಯಗೊಳಿಸಿದರು. ಸುಮಾರು 6 ಸಾವಿರ ಜನರನ್ನೂ ಬಲಿ ತೆಗೆದುಕೊಂಡ ಈ ಜನಾಂಗ ಹೋರಾಟವನ್ನು ಸಾಂಕೇತಿಕವಾಗಿ ನಿಲ್ಲಿಸಲಾಯಿತು.

–ರಾಯಿಟರ್, ಯು. ಎನ್.ಐ.

★ ಮಾನವ ಹಕ್ಕು ನಾಗರಿಕ ಹಕ್ಕು ಹಾಗೂ ಸ್ವಾತಂತ್ರ್ಯದ ವಿಚಾರದಲ್ಲಿ ಭಾರತೀಯರಿಗೆ ಇರುವ ತುಡಿತ ಕಾಳಜಿ ಅಮೇರಿಕನ್ನರಲ್ಲಿ ಇಲ್ಲ. ನಾವು ವಿಶ್ವದಲ್ಲಿ ಎಲ್ಲರಿಗಿಂತ ಮೇಲು ಎನ್ನುವ ಅಹಂಭಾವದಲ್ಲಿ ಬೀಗುತ್ತಿರುವ ಅಮೇರಿಕನ್ನರಿಗೆ ಹೊರ ಜಗತ್ತಿನ ಭಾವನೆ ಅರ್ಥವಾಗುತ್ತಿಲ್ಲ.

—ಶೀಲಾ ಜೋನ್ಸ್, ಅಮೇರಿಕಾದ ಸಾಮ್ರಾಜ್ಯಶಾಹಿ ನೀತಿ ವಿರುದ್ಧ ಪ್ರತಿಭಟನೆ ಸಾರಿರುವ ಕಪ್ಪು ಮಹಿಳೆ.

★ ಬೆಂಗಳೂರು ಮೆಡಿಕಲ್ ಕಾಲೇಜಿಗೆ ಮಾನ್ಯತೆ ಮುಂದುವರಿಯಬೇಕಾದರೆ ಜಾಲಿಂಗ್ ಆಸ್ಪತ್ರೆಯನ್ನು ಇದೇ ಕಾಲೇಜಿನ ಸೌಲಭ್ಯಕ್ಕಾಗಿ ಕಾದಿರಿಸಬೇಕಾಗುತ್ತದೆ

—ಡಾ ॥ ನಂಜುಂಡಪ್ಪ ಸಮಿತಿ.

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Editorial and Managerial Office : L-56, K. V. Temple Street,
Sultanpet B-53 Phone : 75331
Editor P. RamachandraRao
Managing Editor : N. K. Upadhyaya